to defray the charges which will come in course of payment during the financial year ending 31st day of March 1984 in respect of " State Legislatures".

DEMAND NO. 36

ADMINISTRATION OF JUSTICE

" That a rum not exceeding Rs. 11,90,66,000 on Revenue Account inclusive of the sum granted 'on account' be granted to the Government to defray the charges which wiil come in course of payment during the financial year ending 31st March 1984 in respect of " Administration of Justice".

ಶ್ರೀ ವೈ. ರಾಮಕೃಷ್ಣ (ಆನೇಕಲ್).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈ ದಿನ ಈ ಸಭೆಯಲ್ಲಿ ಮಂಡಿಸಿರತಕ್ಕಂತಹ ಬೇಡಿಕೆಗಳ ವಿಚಾರದಲ್ಲಿ ಕೆಲವಾರು ಸಲಹೆಗಳನ್ನು ಕೊಡುವುದಕ್ಕೆ ನಾನು ಇಲ್ಲಿ ನಿಂತಿದ್ದೇನೆ. ಈ ಸಲಹೆಗಳನ್ನು ಕೊಡುವಾಗ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಇಲಾಖೆಗೆ ಸಂಬಂಧಪಟ್ಟಂತೆ 1982–83ನೇ ಸಾಲಿನ ಪರ್‌ಫಾರ್ಮ್ ಬಡ್ಜೆಟ್‌ನ್ನು ಕೊಟ್ಟಿದ್ದಾರೆ. ಆದರೆ ವಸತಿ ಇಲಾಖೆಗೆ ಸಂಬಂಧಪಟ್ಟಂತೆ 1983–84ನೇ ಸಾಲಿಗೆ ಆಗಬೇಕಾಗಿರುವ ಕೆಲಸ ಕಾರ್ಯಗಳ ಬಗ್ಗೆ ಅವರ ಪರ್‌ಫಾರ್ಮ್ ಬಡ್ಜೆಟ್ಟನ್ನು ಕೊಟ್ಟಿದ್ದಾರೆ. ಇದೇ ರೀತಿಯ ಪರ್‌ಫಾರ್ಮ್ ಬಡ್ಜೆಟ್ಟನ್ನು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಇಲಾಖೆಗೆ ಸಂಬಂಧಪಟ್ಟಂತೆ ಏಕೆ ಕೊಟ್ಟಿಲ್ಲ?

ಶ್ರೀ ಎ. ಲಕ್ಷ್ಮೀಸಾಗರ್.—ನೀವು ಕೊಟ್ಟಿದ್ದೀರಾ?

Sri. Y. Ramakrishna.—On what should I speak?

ಶ್ರೀ ಎ. ಲಕ್ಷ್ಮೀಸಾಗರ್.—ತಾವು ಕೂಡ 3 ವರ್ಷಗಳ ಕಾಲ ಮಂತ್ರಿಗಳಾಗಿದ್ದಿರಿ. ಎಷ್ಟು ವರ್ಷದಲ್ಲಿ ಪರ್‌ಫಾರ್ಮ್ ಬಡ್ಜೆಟ್ಟನ್ನು ಕೊಟ್ಟಿರಿ?

ಶ್ರೀ ವೈ. ರಾಮಕೃಷ್ಣ.—ಇದಕ್ಕೆ ಮಾತ್ರ ಪರ್‌ಫಾರ್ಮ್ ಬಡ್ಜೆಟ್ಟನ್ನು ಕೊಟ್ಟಿದ್ದೀರಿ. ಆದರೆ ಬಹಳ ಮುಖ್ಯವಾದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯ ಬಗ್ಗೆ ಏಕೆ ಪರ್‌ಫಾರ್ಮ್ ಬಡ್ಜೆಟ್ಟನ್ನು ಕೊಡಲಿಲ್ಲ? ಯಾವ ಆಧಾರದ ಮೇಲೆ ನಾನು ಮಾತನಾಡಬೇಕು?

ಶ್ರೀ ಎ. ಲಕ್ಷ್ಮೀಸಾಗರ್.—ಅನುಭವದಿಂದ ಮಾತನಾಡಬೇಕು,

ಶ್ರೀ ವೈ. ರಾಮಕೃಷ್ಣ.—ಅನುಭವದಿಂದ ಮಾತನಾಡುವುದು ನನಗೂ ಗೊತ್ತಿದೆ. ಎಷ್ಟು ಕೋರ್ಟಿನ ಕಟ್ಟಡಗಳನ್ನು ಕಟ್ಟುವವರಿದ್ದೀರಿ? ಎಷ್ಟು ಕಛೇರಿ ಕಟ್ಟಡಗಳನ್ನು ಕಟ್ಟುವವರಿದ್ದೀರಿ? ಎಂಬುದರ ಬಗ್ಗೆ ವಿವರ ಮಾತನಾಡುವುದಕ್ಕಾಗಿ ಬೇಕಲ್ಲ.

(INTERRUPTIONS)

ಶ್ರೀ ವೈ. ರಾಮಕೃಷ್ಣ.—ಕಳೆದ 9 ತಿಂಗಳಿನಿಂದಲೂ ಕೆಲಸ ಮಾಡುತ್ತಿದ್ದಾರೆ ಮಂತ್ರಿಗಳಾಗಿ. ನಿಮ್ಮ ಜವಾಬ್ದಾರಿ ಇಲ್ಲವೇ?

ಶ್ರೀ ಎ. ಲಕ್ಷ್ಮೀಸಾಗರ್.—ನೀವು ಮಾಡಿದ್ದನ್ನೇ ಕೊಡಬೇಕು.

ಶ್ರೀ ವೈ. ರಾಮಕೃಷ್ಣ.—ಹಾಗಾದರೆ ವಸತಿ ಇಲಾಖೆಗೆ ಸಂಬಂಧಪಟ್ಟಂತೆ ಮಾತ್ರ ಏಕೆ ಪರ್‌ಫಾರ್ಮೆನ್ಸ್ ಬಡ್ಜೆಟ್ಟನ್ನು ಕೊಟ್ಟಿದ್ದೀರಿ? ಅದೂ ಇವತ್ತು ರಾತ್ರಿ ಕಳುಹಿಸಿಕೊಟ್ಟಿದ್ದಾರೆ. ಇದಕ್ಕೆ ಮಾತ್ರ ಏಕೆ ಕಳುಹಿಸಿಕೊಡಲಿಲ್ಲ?

ಇದರಲ್ಲಿ ಇವರಿಗೆ ಆಸಕ್ತಿ ಇಲ್ಲವೆಂಬ ತೀರ್ಮಾನಕ್ಕೆ ಬರುವುದನ್ನು ಬಿಟ್ಟರೆ ಬೇರೆ ಮಾರ್ಗ ಇಲ್ಲ. ಪ್ರಜಾಪ್ರಭುತ್ವ ಯಶಸ್ವಿಯಾಗಿ ಕೆಲಸ ಮಾಡಬೇಕಾದರೆ, ಮೂರು ಅಂಗಗಳು ಬಹಳ ಮುಖ್ಯವಾದವುಗಳು. ಮೊದಲನೆಯದು ಶಾಸಕಾಂಗ, ಎರಡನೆಯದು ನ್ಯಾಯಾಂಗ, ಮೂರನೆಯದು ಕಾರ್ಯಾಂಗ. ಎಕ್ಸಿಕ್ಯೂಟೀವ್,

ಜ್ಯುಡಿಷಿಯರಿ ಹಾಗೂ ಲೆಜಿಸ್ಲೇಚರ್. ಎಲ್ಲಿಯವರೆವಿಗೆ ಈ ಮೂರು ಅಂಗಗಳು ತಮ್ಮ ತಮ್ಮ ವ್ಯಾಪ್ತಿಗೆ ಒಳಪಟ್ಟು ಯಶಸ್ವಿಯಾಗಿ ಕೆಲಸಗಳನ್ನು ಮಾಡಿಕೊಂಡು ಹೋಗುತ್ತವೆಯೋ, ಅಲ್ಲಿಯತನಕ ಪ್ರಜಾ-ಪ್ರಭುತ್ವಕ್ಕೆ ಯಾವುದೇ ರೀತಿಯ ಧಕ್ಕೆ ಬರುವುದಿಲ್ಲ. ಈ ಅಂಗದ ಮೇಲೆ ಏನಾದರೂ ಓವರ್‌ಲ್ಯಾಪ್ ಆದರೆ ಆಗ ಪ್ರಜಾಪ್ರಭುತ್ವಕ್ಕೆ ಧಕ್ಕೆ ಬರುತ್ತದೆ. ಎಲ್ಲಾ ರಾಷ್ಟ್ರದಲ್ಲೂ, ಎಲ್ಲಾ ರಾಜ್ಯದಲ್ಲೂ ನಡೆದಿರತಕ್ಕಂಥ ಚರ್ಚೆ ಇದು. ನಾನು ಪ್ರಪ್ರಥಮವಾಗಿ ಕರ್ನಾಟಕ ರಾಜ್ಯದಲ್ಲಿರುವ ಶಾಸಕಾಂಗದ ಬಗ್ಗೆ ಕೆಲವು ಮಾತು ಗಳನ್ನಾಡಲು ಇಚ್ಛೆಪಡುತ್ತೇನೆ. ಏತಕ್ಕೆಂದರೆ ಶಾಸಕಾಂಗ ಏನ್ನುವುದು ಬಹಳ ಮುಖ್ಯ. ಈ ಶಾಸಕಾಂಗ ಏನು ಇದೆ, ಇದು ಶತಮಾನಕ್ಕೂ ಹಳೆಯದಾಗಿರುತ್ತೆ. ನಾನು ನೋಡಿದ್ದರಲ್ಲಿ ಕರ್ನಾಟಕ ರಾಜ್ಯದ ಶಾಸ ಕಾಂಗಕ್ಕೆ ವಿಶೇಷವಾದಂಥ ಗೌರವ ಮತ್ತು ವಿಶೇಷವಾದಂಥ ಮನ್ನಣೆ ಸಿಗುತ್ತದೆ. ಅದಕ್ಕೆ ಅನೇಕ ಕಾರಣ ಗಳೂ ಇವೆ. ಹೇಗೆಂದರೆ ಇಲ್ಲಿ ನಡೆಯತಕ್ಕ ನಡವಳಿಕೆಗಳು, ಇಲ್ಲಿಯ ಸಭಾಸದಸ್ಯರ ನಡವಳಿಕೆಗಳು. ಇಲ್ಲಿಯ ಅಧ್ಯಕ್ಷರ ನಡವಳಿಕೆಗಳು ಮತ್ತು ಇಲ್ಲಿ ಯಾವ ರೀತಿ ಕಾರ್ಯ ಕಲಾಪಗಳು ನಡೆಯುತ್ತಾ ಇವೆ ಅವುಗಳನ್ನೆಲ್ಲಾ ನೋಡಿದರೆ ಇದಕ್ಕೆ ವಿಶೇಷವಾದಂಥ ಗೌರವ ಸ್ಥಾನವನ್ನು ಕೊಟ್ಟಿದ್ದಾರೆ. ಪೂಜ್ಯ ಸ್ಥಾನವನ್ನು ಪಡೆದಿದೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಈಗ ಮಾನ್ಯ ಸಚಿವರಾದಂಥ ಶ್ರೀಮಾನ್ ಎ. ಲಕ್ಷ್ಮೀಸಾಗರ್‌ರವರು ಈ ಸ್ಥಾನದಲ್ಲಿದ್ದಾಗ ಅವರು ಏನು ಭಾಷಣ ಮಾಡಿದರು ಅದನ್ನು ನಾನು ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ. ಆ ಬಗ್ಗೆ ಹೇಳ ಬೇಕಾದರೆ ನನ್ನಲ್ಲಿ ಎಲ್ಲಾ ಪ್ರೊಸೀಡಿಂಗ್ಸ್ ಇವೆ. ಆದರೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಒಟ್ಟಿನಲ್ಲಿ ಹೇಳಬೇಕಾದರೆ, ಸ್ವಾಮಿ, ಈ ಶಾಸಕಾಂಗ ನಿರ್ಧಾರವಾಗಿ ತಮ್ಮ ಅನಿಸಿಕೆಗಳ ಬಗ್ಗೆ ಅಂಜಿಕೆಯನ್ನು ಬಿಟ್ಟು ನಡೆಯಬೇಕಾಗಿರುತ್ತದೆ. ವಿಷಯ ಏನೇ ಇರಲಿ ಇಲ್ಲಿಗೆ ನಾವು 224 ಜನರು ಏನು ಆರಿಸಿ ಬಂದಿದ್ದೇವೆ, ಎಲ್ಲರೂ ಮಾತನಾಡುತ್ತಾರೆ. ಹಾಗೆ 224 ಜನರೂ ಮಾತನಾಡುವಾಗ ಬಹುಶಃ ಕರ್ನಾಟಕ ಜನತೆಯ ಒಂದು ಪ್ರತಿಬಿಂಬ ಇಲ್ಲಿ ಇದೆ ಅನ್ನುವ ಭಾವನೆ ಬರುತ್ತದೆ. ಅಲ್ಲದೆ ಪ್ರತಿಯೊಂದು ಕ್ಷೇತ್ರದಲ್ಲೂ ಕೂಡ ಒಂದೊಂದು, ಎರಡೆರಡು, ಮೂರು ಮೂರು ಸಮಸ್ಯೆಗಳು ಇದ್ದೇ ಇರುತ್ತವೆ. ಆ ಸಮಸ್ಯೆಗಳು ಒಂದೇ ತರಹ ಇರುವುದಿಲ್ಲ. ಒಂದೊಂದು ಕ್ಷೇತ್ರದಲ್ಲಿ ಒಂದೊಂದು ತರಹವಾದಂಥ ಸಮಸ್ಯೆ ಇರುತ್ತದೆ. ಒಂದು ಕ್ಷೇತ್ರದಲ್ಲಿ ವಿನಿಜ ಸಂಪತ್ತು ಇಲ್ಲ, ಒಂದು ಕ್ಷೇತ್ರದಲ್ಲಿ ಉಳಲಿಕ್ಕೆ ಯೋಗ್ಯ ಭೂಮಿ ಇಲ್ಲ, ಆಥವಾ ಪರಿಹಾರ ಕಾಮಗಾರಿಗಳು ನಡೆಯುತ್ತಾ ಇಲ್ಲ, ಒಂದೊಂದು ಕ್ಷೇತ್ರದಲ್ಲಿ ಅತಿವೃಷ್ಟಿ, ಅನಾವೃಷ್ಟಿ. ಅಭಾವ ಇವೆಲ್ಲಾ ಇರುತ್ತದೆ. ಪ್ರತಿ ಯೊಬ್ಬರೂ ಕೂಡ ಅವರವರ ಅನಿಸಿಕೆಗಳನ್ನು ಇಲ್ಲಿ ಹೇಳಬೇಕು. ಜೊತೆಗೆ ನಮ್ಮ ರಾಜ್ಯದಲ್ಲಿ ಅತಿ ಮುಖ್ಯವಾಗಿ ಚರ್ಚೆಯಾಗತಕ್ಕಂಥ ರೀತಿ ಈಗ ಇರತಕ್ಕಂಥ ವಿಷಯಗಳಮೇಲೆ ಮಾಡಲೇ ಬೇಕಾಗುತ್ತದೆ. ಅದು ಶಾಸಕಾಂಗದ ಧರ್ಮ ಮತ್ತು ನಿಯಮ. ನಮ್ಮ ಸಮಸ್ಯೆಗಳು ಬೃಹತ್ ಆಗಿವೆ ಅನ್ನುವುದು ನಮಗೂ ಗೊತ್ತಿದೆ, ನಿಮಗೂ ಗೊತ್ತಿದೆ. ಮತ್ತು ಸಂಪನ್ಮೂಲಗಳಲ್ಲಿ ನಮ್ಮ ರಾಜ್ಯ ಯಾವ ರಾಜ್ಯಕ್ಕಿಂತಲೂ ಕಡಿಮೆ ಏನೂ ಇಲ್ಲ. ನಮ್ಮ ರಾಜ್ಯದಲ್ಲಿ ಸುಮಾರು 250 ಮೈಲಿ ಕರಾವಳಿ ಇದೆ, ದಿಟ್ಟ ಅರಣ್ಯ ಇದೆ, ವಿನಿಜ ಸಂಪತ್ತು ಇದೆ, ಅಗಾಧವಾದ ಜನಸಂಪತ್ತೆ ಇದೆ, ಇವೆಲ್ಲಾ ಇದೆ. ಮತ್ತೊಂದು ಕಡೆ ಬೇರೆ ಸಮಸ್ಯೆಗಳು ಇವೆ. ಆ ಸಮಸ್ಯೆಗಳು ಯಾವುದು ಎಂದರೆ, ರೈತರ ಸಮಸ್ಯೆ, ಕಾರ್ಮಿಕರ ಸಮಸ್ಯೆ, ವಿದ್ಯಾರ್ಥಿಗಳ ಸಮಸ್ಯೆ, ನಿರು ದ್ಯೋಗದ ಸಮಸ್ಯೆ, ಸ್ಟೈಪೆಂಡರಿ ಗ್ರಾಜುಯೇಟ್ಸ್ ಸಮಸ್ಯೆ, ಹರಿಜನ ಗಿರಿಜನರ ಸಮಸ್ಯೆ, ಹಿಂದುಳಿದವರ ಸಮಸ್ಯೆ ಮತ್ತು ಬಡತನ ರೇಖೆಯಲ್ಲಿರುವವರನ್ನು ಮೇಲಕ್ಕೆತ್ತುವಂಥಾ ಸಮಸ್ಯೆ ಮತ್ತು ಲಾ ಅಂಡ್ ಆರ್ಡರ್ ಸಿಚುಯೇಷನ್ ಮತ್ತು ಸರ್ಕಾರ ನಡೆಸತಕ್ಕಂಥವ್ಯರಲ್ಲಿ ಇರತಕ್ಕಂಥಾ ಲೋಪದೋಷಗಳ ಬಗ್ಗೆ ; ಅತಿವೃಷ್ಟಿ, ಅನಾವೃಷ್ಟಿಯ ಸಮಸ್ಯೆಗಳು ಮತ್ತು ಬರಗಾಲದ ಸಮಸ್ಯೆ. ಹೀಗೆಲ್ಲಾ ಸಮಸ್ಯೆಗಳು ಇವೆ. ಪ್ರತಿ ಯೊಬ್ಬರಿಗೂ ಕೂಡ ಅವರಿವರಿಗೆ ಆಸಕ್ತಿ ಇರುವ ವಿಷಯಗಳ ಮೇಲೆ ಮಾತನಾಡಬೇಕು ಹಾಗೂ ಆ ವಿಷಯ ಗಳನ್ನು ಈ ಮಾನ್ಯ ಸಭೆಗೆ ಹಾಗೂ ಸರ್ಕಾರದ ಗಮನವನ್ನು ಸೆಳೆದು ಅವರಿಗೆ ಇರತಕ್ಕಂಥ ಸಮಸ್ಯೆಗಳನ್ನು ನಿವಾರಣೆ ಮಾಡಿಕೊಳ್ಳಬೇಕು ಎಂಬ ಇಚ್ಛೆ ಇದೆ. ಆದರೆ ಇವೊತ್ತು ಏನಾಗಿದೆ ಎಂದರೆ ಇದು ವಿಷ್ಪರಮಟ್ಟಿಗೆ ಆಗಿದೆಯೋ, ಇದಕ್ಕೆ ಯಾರು ಕಾರಣರೋ ಅದು ನಮಗೆ ಗೊತ್ತಿಲ್ಲ. ಆದರೆ ಒಂದು ಮಾತು ಹೇಳುತ್ತೇನೆ. ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರತಕ್ಕಂಥ ಶ್ರೀಮಾನ್ ಎ. ಲಕ್ಷ್ಮೀಸಾಗರ್‌ರವರು ಈ ಖಾತೆಯನ್ನು ವಹಿಸಿ ಕೊಂಡ ಮೇಲೆ ಏನು ಭಾಷಣ ಮಾಡಿದ್ದಾರೆ ಆ ಭಾಷಣ ನನ್ನ ಹತ್ತಿರ ಇದೆ. ಅವರಿಗೆ ಆ ಭಾಷಣವನ್ನು ನಾನು ನೆನಪು ಮಾಡಿಕೊಡುತ್ತೇನೆ. ತಮ್ಮ ಅನಿಸಿಕೆಗಳ ಬಗ್ಗೆ ಎರಡು ವಿಚಾರಗಳನ್ನು ಅವರ ಮುಂದೆ ಇಟ್ಟು ಅದಕ್ಕೆ ಪರಿಹಾರವನ್ನು ಕಂಡುಹಿಡಿಯಬೇಕಾಗಿದೆ. ಅವರು ಕರೆಯತಕ್ಕಂಥ ಸೆಷನ್ ಜೇ ಏನು ಇದೆ ಅದು ಏನೂ ಸಾಲದು ಎನ್ನುವ ಮಾತನ್ನು ತಮ್ಮ ಭಾಷಣದಲ್ಲೇ ಹೇಳಿದ್ದೀರಿ. ನಾನು ಆ ಮಾತನ್ನು ಮತ್ತೆ

ಹೇಳುವುದು ಅನಾವಶ್ಯಕ ಎಂದು ಹೇಳುತ್ತೇನೆ. ಆದರೆ ನಾವು ಲೋಕಸಭಾ ಮಾದರಿಯಂತೆ ನಾವೂ ಅಡಾಪ್ಟ್ ಮಾಡಬೇಕು ಎಂದು ಕಳೆದ ಸಾರಿ ಏನು ತೀರ್ಮಾನ ಮಾಡಿದೆವು, ಅನೇಕ ದಿವಸಗಳ ಕಾಲ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರು ಕೂತು ಚರ್ಚೆ ಮಾಡಿ, ದಕ್ಷಿಣ ಭಾರತದಲ್ಲಿರತಕ್ಕಂಥ ಕೇರಳ ದಲ್ಲಿರುವ ಶಾಸನಸಭೆಗಳಲ್ಲಿ ಏನು ನಿಯಮಾವಳಿಗಳು ಇವೆ, ತಮಿಳುನಾಡಿನಲ್ಲಿನ ಶಾಸನಸಭೆಯಲ್ಲಿ, ಏನು ನಿಯಮಾವಳಿಗಳು ಇವೆ, ಆಂಧ್ರ ಪ್ರದೇಶದಲ್ಲಿನ ಶಾಸನ ಸಭೆಯಲ್ಲಿ ಏನು ನಿಯಮಾವಳಿಗಳು ಇವೆ, ಮಹಾರಾಷ್ಟ್ರದ ಶಾಸನಸಭೆಯಲ್ಲಿ ಏನು ನಿಯಮಾವಳಿಗಳು ಇವೆ ಮತ್ತು ಲೋಕಸಭೆಯಲ್ಲಿ ಯಾವ ರೀತಿಯಾದ ನಿಯಮಾವಳಿಗಳು ಇವೆ, ಇವುಗಳನ್ನೆಲ್ಲಾ ಕ್ರೋಢೀಕರಿಸಿ ಏನು ಒಂದು ನಿಯಮಾವಳಿಗಳನ್ನು ಮಾಡಿದೆವು, ಇದರ ಗುರಿ ಲೋಕಸಭೆಯ ಮಾದರಿಯ ಹಾಗೆ ಇರಬೇಕೆನ್ನುವುದು, ಆ ರೀತಿಯಾಗಿ ಈವಾಗ ನಾವು ಹತ್ತಿರ ಹತ್ತಿರ ಬಂದಿದ್ದೇವೆ. ಲೋಕಸಭಾ ಮಾದರಿಯ ಹಾಗೆ ಅಡಾಪ್ಟ್ ಮಾಡುತ್ತಿದ್ದೇವೆ. ಲೋಕ-ಸಭೆಯಲ್ಲಿರುವ ಹಾಗೆ ಪ್ರಶ್ನೋತ್ತರಗಳನ್ನು ಇದರಲ್ಲಿ ಅಳವಡಿಸಿದ್ದೇವೆ, ನಿರ್ಣಯಗಳನ್ನು ಅಳವಡಿಸಿದ್ದೇವೆ, ಖಾಸಗೀ ನಿರ್ಣಯಗಳನ್ನು ಅಳವಡಿಸಿದ್ದೇವೆ. ಮೋಷನ್ ಮತ್ತು ಆಡ್ಜರ್ನ್‌ಮೆಂಟ್ ಮೋಷನ್ ಅವನ್ನೂ ಕೂಡಾ ಸಾಮಾನ್ಯವಾಗಿ ಅಳವಡಿಸಿ ಲೋಕಸಭಾ ಮಾದರಿಯಲ್ಲಿ ಅಡಾಪ್ಟ್ ಮಾಡಿ ಅದರ ಹತ್ತಿರ ಹತ್ತಿರ ಬರುತ್ತಾ ಇದ್ದೇವೆ. ಮೊದಲು ವಾರಕ್ಕೆ 6 ದಿವಸ ಸೆಷನ್ ಇದ್ದುದನ್ನು 5 ದಿವಸಕ್ಕೆ ಇಳಿಸಿದ್ದೇವೆ. ಈ ರೀತಿಯಾಗಿ ನಾವು ಒಂದು ಅಂಡರ್‌ಸ್ಟ್ಯಾಂಡಿಂಗ್‌ಗೆ ಬಂದಿದ್ದೇವೆ. ಆದರೆ ಅಲ್ಲಿ ಎಷ್ಟು ದಿವಸ ಸೆಷನ್ ನಡೆಸುತ್ತಾರೆ, ಇಲ್ಲಿ ಎಷ್ಟು ದಿವಸ ನಡೆಸುತ್ತೇವೆ ಅನ್ನುವುದನ್ನು ನೋಡಬೇಕು. ಕನಿಷ್ಟಪಕ್ಷ 90 ರಿಂದ 100 ದಿವಸವಾದರೂ ಕೂಡ ನಡೆಸಬೇಕು. ಆವಾಗ ಇಲ್ಲಿರತಕ್ಕಂಥ ಎಲ್ಲಾ ಶಾಸನಾಸಭಾ ಸದಸ್ಯರುಗಳಿಗೆ ಮಾತನಾಡುವುದಕ್ಕೆ ಅವಕಾಶವಾಗುತ್ತದೆ ಮತ್ತು ಅನಿಷಿಕೆಗಳನ್ನು ಸಭೆಯ ಮುಂದೆ ಇಟ್ಟು ಸರ್ಕಾರದ ಗಮನವನ್ನು ಸೆಳೆದು ಅವರು ಆರಿಸಿ ಬಂದಿದ್ದ ಕ್ಷೇತ್ರದಲ್ಲಿ ಏನೇನು ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕೋ ವಿಶೇಷವಾದಂಥ ಪರಿಸ್ಥಿತಿ ಕಡೆಗೆ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಸ್ವಾಮಿ, ಈ ಶಾಸನ ಸಭೆ ಯಾವ್ಯಾವ ವರ್ಷದಲ್ಲಿ ಎಷ್ಟೆಷ್ಟು ದಿವಸ ಸೇರಿದೆ ಅನ್ನುವುದರ ಬಗ್ಗೆ ನನ್ನಲ್ಲಿ ಮಾಹಿತಿ ಇದೆ, ಆ ಬಗ್ಗೆ ನಾನು ಈ ಸಂದರ್ಭದಲ್ಲಿ ಸ್ವಲ್ಪ ವಿವರಗಳನ್ನು ಕೊಡಲೇ ಬೇಕಾಗುತ್ತದೆ. ಈ ವಿವರಗಳು ಈ ರೀತಿ ಇದೆ :—

1972 ರಲ್ಲಿ	82 ದಿವಸ
1973 ರಲ್ಲಿ	97 ದಿವಸ
1974 ರಲ್ಲಿ	73 ದಿವಸ
1975 ರಲ್ಲಿ	54 ದಿವಸ
1976 ರಲ್ಲಿ	63 ದಿವಸ
1977 ರಲ್ಲಿ	47 ದಿವಸ
1978 ರಲ್ಲಿ	65 ದಿವಸ
1979 ರಲ್ಲಿ	65 ದಿವಸ
1980 ರಲ್ಲಿ	66 ದಿವಸ
1981 ರಲ್ಲಿ	67 ದಿವಸ

97 ದಿವಸ ಸೆಷನ್ ನಡೆಯುತ್ತಿದ್ದುದು 67 ದಿವಸಕ್ಕೆ ಬಂದು ಮುಟ್ಟಿದೆ. ನಾನು ಈ ವಾದವನ್ನು ಏತಕ್ಕೆ ಮಂಡಿಸುತ್ತಿದ್ದೇನೆಂದರೆ ತಾವು ಅಧಿಕಾರಕ್ಕೆ ಬಂದು 9 ತಿಂಗಳಾಯಿತಲ್ಲಾ ಎಷ್ಟು ದಿವಸ ಸೆಷನ್ ಕರೆದಿದ್ದೀರಾ ಹೀಗಾದರೆ ನಾವು ಜನಸಾಮಾನ್ಯರ ಆಗುಹೋಗುಗಳ ಬಗ್ಗೆ ಯಾವ ರೀತಿ ಹೇಳುವುದಕ್ಕಾಗುತ್ತದೆ ಹೇಳಿ. ದಯವಿಟ್ಟು ತಾವು ಉತ್ತರ ಕೊಡುವಾಗ ಈ ಪ್ರಶ್ನೆಗಳಿಗೆ ದಯಮಾಡಿ ಉತ್ತರ ಕೊಡಿ. ಇನ್ನೊಮ್ಮೆ ನಾನು ಸ್ಪಷ್ಟಪಡಿಸುತ್ತೇನೆ. ಅದೇನೆಂದರೆ ಜನವರಿ 10, 1983 ರಂದು ತಾವು ಅಧಿಕಾರ ಪಡೆದುಕೊಂಡಿರಿ. ಅಲ್ಲಿಂದ ಈವರೆಗೂ ಅಂದರೆ 9 ತಿಂಗಳಲ್ಲಿ ಎಷ್ಟು ದಿವಸ ಸೆಷನ್ ಕರೆದಿದ್ದೀರಾ ? ಹೀಗಾದರೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಬರುತ್ತದೆಯೋ ?

ಶ್ರೀ ಎ. ಲಕ್ಷ್ಮೀಸಾಗರ್.—ತಾವು ಆಗಸ್ಟ್ 30ರ ತನಕ ಕಾದು ನೋಡಿ.

ಶ್ರೀ ವೈ. ರಾಮಕೃಷ್ಣ.—ನಾವು ಅದುವರೆಗೆ ಏತಕ್ಕೆ ಕಾಯಬೇಕು ? ಇದು ಬ್ಯಾಡ್ ಆರ್ಗ್ಯುಮೆಂಟ್.

ಶ್ರೀ ಎ. ಲಕ್ಷ್ಮೀಸಾಗರ್.—ಅದು ಬ್ಯಾಡ್ ಆರ್ಗ್ಯುಮೆಂಟ್ ಹೇಗಾಗುತ್ತದೆ ? ನೀವು ಹೇಳುವ

ಪ್ರಕಾರ ವರ್ಷಕ್ಕೆ ಇಷ್ಟು ದಿವಸ ಸೆಷನ್ ಕರೆಯಬೇಕೆನ್ನುವ ವಾದ ಏನು ಇವೆ ಅದು ಸರಿಯಲ್ಲ ಮತ್ತು ವರ್ಷಕ್ಕೆ ಇಷ್ಟು ದಿವಸ ಆದರೆ 9 ತಿಂಗಳಿಗೆ ಇಷ್ಟು ದಿವಸ ಸೆಷನ್ ನಡೆಯಬೇಕು ಅಂತ ಹೇಳುವುದು ಸರಿಯೇ ?

ಶ್ರೀ ವೈ. ರಾಮಕೃಷ್ಣ.—ತಾವು ಕನ್ನಡಿಯನ್ನು ಹಾಕಿಕೊಂಡಿರತಕ್ಕದ್ದರಲ್ಲಿ ದೋಷ ಇವೆ. ನನ್ನ ಕನ್ನಡಿ ಸರಿಯಾಗಿದೆ. ತಾವೇನು ಇಲ್ಲಿದ್ದಾಗ ಭಾಷಣ ಮಾಡಿದ್ದೀರಿ ಅದನ್ನು ನಾನು ಹೇಳುವಾಗ ಅದನ್ನು ಅವರು ನಂಬಿದಿದರೆ ದೋಷ ಯಾರದು ?

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಯಾವ ಕಾಂಟೆಕ್ಸ್ಟ್‌ನಲ್ಲಿ ಹೇಳಿದ್ದೇನೆಯೋ ಗೊತ್ತಾಗಲಿಲ್ಲ. ಸಭೆಯು ಕಾರ್ಯಕಲಾಪಗಳನ್ನು ನಡೆಸತಕ್ಕ ದಿನಗಳ ಸಂಖ್ಯೆ ಕಡಿಮೆಯಾಗುತ್ತಿದೆ ಅದನ್ನು ಜಾಸ್ತಿ ಮಾಡಬೇಕು ಎನ್ನತಕ್ಕ ವಾದವನ್ನು ಅವರು ಮಾಡುತ್ತಿದ್ದಾರೆ. ನಾವು ಅಧಿಕಾರದಲ್ಲಿ ಎಷ್ಟು ದಿವಸ ಇದ್ದೇವೆ ಅದನ್ನು ಇವರು ಲೆಕ್ಕ ಹಾಕಿ ಕರಾರುವಾಕ್ಕಾಗಿ ಹೇಳುತ್ತಿದ್ದಾರೆ. ಅವರ ಕಾಲದಲ್ಲಿ ವರ್ಷಕ್ಕೆ 65 ದಿವಸವಾದರೆ 8 ತಿಂಗಳಲ್ಲಿ ಎಷ್ಟು ದಿವಸ ಅಸೆಂಬ್ಲಿಯನ್ನು ಕರೆದಿದ್ದೀರಿ ಎಂದು ಕೇಳುತ್ತಿದ್ದಾರೆ. ತಾವು ಇವನ್ನು ಆರ್ಥಿಕ ವರ್ಷವನ್ನು ಪರಿಗಣನೆಗೆ ತೆಗೆದುಕೊಂಡು ನೋಡಬೇಕೇ ಹೊರತು ವರ್ಷದಲ್ಲಿ 8 ತಿಂಗಳನ್ನು ತೆಗೆದುಕೊಂಡು ನೋಡಬಾರದು.

ಶ್ರೀ ವೈ. ರಾಮಕೃಷ್ಣ.—ನಾನು ಇಲ್ಲಿ ಹೇಳುವುದು ಇಷ್ಟೆ. ನುದಿನಂತೆ ತಾವು ನಡೆಯುಕೊಳ್ಳಬೇಕು. ಏನಾಯಿತು ಎಂದರೆ ಇವರು ಒಂದು ಪೆಚ್ಚೆ ಮುಂದೆ ಹೋಗಿ ಜನರಿಗೆ ವಚನಗಳನ್ನು ಕೊಟ್ಟರು. ನಾನು ಇವರು ಮಾಡಿದಂಥ ಭಾಷಣವನ್ನು ಕೇಳಿದ್ದೇನೆ, ಇವರು ಮಾಡಿದಂಥ ರೆಕಾರ್ಡನ್ನೂ ಸಹ ನಾನು ಇಟ್ಟು ಕೊಂಡಿದ್ದೇನೆ. ಅವರು ಅಧಿಕಾರಕ್ಕೆ ಬರುತ್ತಾರೆಂದು ಅವರು ಈ ಮಾತನ್ನು ಹೇಳಲಿಲ್ಲ. ಅವರಿಗೆ ಆವೃಷ್ಟವೋ ನಮಗೆ ದುರಾದೃಷ್ಟವೋ ಅವರು ಅಧಿಕಾರಕ್ಕೆ ಬಂದರು. ಇವರ ಭಾಷಣದಲ್ಲಿ ಬೆಲೆಗಳನ್ನು ಇಳಿಸುತ್ತೇವೆಂದು ಹೇಳಿದರು, ಇವತ್ತು ಅಕ್ಕಿಯ ಬೆಲೆ ಐದು ರೂಪಾಯಿಗಳಿಗೆ ಒಂದು ಕೆ.ಜಿ. ಆಗಿದೆ. ಎನ್ನೆ 20 ರೂಪಾಯಿಗಳ ವರೆಗೂ ಹೋಗಿದೆ. ಇವರು ಇವರ ಕ್ಷೇತ್ರಕ್ಕೆ ಹೋದಾಗ ಜನರು ಹಿಡಿದುಕೊಂಡಿದ್ದಾರೆ. ಮಂತ್ರಿಗಳು ಎಲ್ಲಿಗೆ ಹೋದರೂ ಸಹ ಜನ ಇವರನ್ನು ಹಿಡಿದುಕೊಳ್ಳುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಚಿಕ್ಕಪೇಟೆಯಲ್ಲಿ ನಿಮ್ಮನ್ನು ಹಿಡಿದುಕೊಂಡಿದ್ದಾರೆ, ಮಂಡ್ಯಾದಲ್ಲಿ ಶ್ರೀಮತಿ ಚಂದ್ರಪ್ರಭಾ ಅರಸ್ ಅವರನ್ನೂ ಹಿಡಿದು ಕೊಂಡಿದ್ದಾರೆ. ಇವರು ಅಧಿಕಾರಕ್ಕೆ ಬರುವುದಿಲ್ಲವೆಂದು ತಿಳಿದುಕೊಂಡು ಏನೋ ಹೇಳಿದರು. ಆದರೆ ಅಧಿಕಾರಕ್ಕೆ ಬಂದುಬಿಟ್ಟರು.

ಶ್ರೀ ಎ. ಲಕ್ಷ್ಮೀಸಾಗರ್.—ಬಾಯಿಗೆ ಬೀಗ ಹಾಕಿ ಸಭೆಯಲ್ಲಿ ಭಾಷಣ ಮಾಡಬಾರದು ಎಂದು ಕಾನೂನು ಮಾಡಿಬಿಟ್ಟರು. ಇದನ್ನು ಅವರು ನೆನಪಿನಲ್ಲಿಟ್ಟುಕೊಳ್ಳಬೇಕು.

ಶ್ರೀ ವೈ. ರಾಮಕೃಷ್ಣ.—ಒಂದು ವೇಳೆ ನೀವು ಹೇಳುವುದು ಕರೆಕ್ಟ್ ಎಂದು ತಿಳಿದುಕೊಳ್ಳುವುದಾದರೆ ನಾವು ಇಲ್ಲಿ ಕುಳಿತಿದ್ದೇವೆಂದು ಇಟ್ಟುಕೊಳ್ಳೋಣ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ರಾಮಕೃಷ್ಣನ್ ಅವರು ಆವೃಷ್ಟವೋ, ದುರಾವೃಷ್ಟವೋ ಇವರು ಅಧಿಕಾರಕ್ಕೆ ಬಂದುಬಿಟ್ಟಿದ್ದಾರೆಂದು ಹೇಳಿದರು. ಒಂದುಪಕ್ಷ ಇವರು ಅಧಿಕಾರಕ್ಕೆ ಬಂದಿದ್ದರೆ ಬೆಲೆಗಳು ಕಡಿಮೆಯಾಗುತ್ತಿತ್ತೆ ?

SRI, Y. RAMAKRISHNA.—Definitely we would have taken action. The present position is due to the bad distribution system of the Government.

ಡಾ. ವಿ. ಎಸ್. ಆಚಾರ್ಯ.—ಆಕ್ಷನ್ ತೆಗೆದುಕೊಳ್ಳುವ ಹಾಗೆಯೂ ಮಾಡುತ್ತಿರಲಿಲ್ಲ. ತಮ್ಮ ಕಾಲದಲ್ಲಿ ಬೆಲೆಗಳು ಎರಡು ಪಟ್ಟು ಏರಿದ್ದವು.

SRI. M. S. KRISHNAN.—The Hon'ble Prime Minister Smt. Indira Gandhi has stated that the price rise is a global phenomenon.

ಶ್ರೀ ವೈ. ರಾಮಕೃಷ್ಣ.—ಅದಕ್ಕೋಸ್ಕರವಾಗಿ ಇವರ ಮನಸ್ಸಿನಲ್ಲಿ ಭಯ ಜಿಗುಪ್ಸೆ ಇದೆಯೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ರೈತರಿಗೆ ಸಾಲವನ್ನು ವಜಾ ಮಾಡುತ್ತೇವೆಂದು ಹೇಳಿದರು, ಹಾಗೆ ಮಾಡುತ್ತೇವೆಂದು, ಹೀಗೆ ಮಾಡುತ್ತೇವೆಂದು ಎಲ್ಲಾ ಹೇಳಿದರು. ತಾವು ಪ್ರಜಾಪ್ರಭುತ್ವದಲ್ಲಿ ನಂಬಿಕೆಯನ್ನು ಇಟ್ಟಿರುವುದಾದರೆ ಪ್ರತಿಯೊಂದು ವಿಷಯಗಳೂ ಸುದೀರ್ಘವಾಗಿ ಚರ್ಚೆಯಾಗಬೇಕಲ್ಲ ?

ಸದಸ್ಯರುಗಳು ಮನಸ್ಸಿನ ಆಸೆಗಳನ್ನು ಇಲ್ಲಿ ಚರ್ಚೆಮಾಡಬೇಕಾದರೆ ಮತ್ತು ಅವರಿಗೆ ಬೇಕಾದಂಥ ಪರಿಹಾರವನ್ನು ಕಂಡುಕೊಳ್ಳಬೇಕಾದರೆ ಆ ಒಂದು ಅವಕಾಶವನ್ನು ಮಾಡಿಕೊಡಬೇಕು, ಇದು ಆದರ ಅವರ ಮನಸ್ಸಿಗೆ ಉಲ್ಲಾಸವಾಗುತ್ತದೆ, ಮನಸ್ಸು ಹಗುರವಾಗುತ್ತದೆ. ತಾವು ಬಂದ ಕೂಡಲೆ ಪೇಪರ್‌ನಲ್ಲಿ ದೊಡ್ಡದಾಗಿ 'ಇಂಡಿಪೆಂಡೆಂಟ್ ಆಫ್ ದಿ ಲೆಜಿಸ್ಲೇಚರ್' ಎಂದು ಹೇಳಿಕೆಯನ್ನು ಕೊಟ್ಟಿದ್ದೀರಿ. ನನಗೆ ಇದನ್ನು ನೋಡಿ ಆಶ್ಚರ್ಯವಾಯಿತು. ಯಾವ ರೀತಿಯ ಸ್ವಾತಂತ್ರ್ಯವನ್ನು ಇದಕ್ಕೆ ತಾವು ಕೊಟ್ಟಿರಿ ? ಇದರ ಬಗ್ಗೆ ಸರ್ಕಾರಿ ಆಜ್ಞೆಯಾಗಿದೆಯೇ ? ಅದನ್ನು ನೋಡಿ ತಾವೇನು ಮಾಡಿದ್ದೀರಿ ಎಂದು ಸಂತೋಷ ಪಡುತ್ತೇನೆ. ಇನ್ನು ಮುಂದೆ ಶಾಸಕಾಂಗ ಸರ್ವ ಸ್ವತಂತ್ರವಾಗಿ ಕೆಲಸ ಮಾಡುತ್ತದೆ ಎನ್ನುವುದನ್ನು ಪೇಪರ್‌ನಲ್ಲಿ ನಾನು ನೋಡಿ ಸಂತೋಷಪಟ್ಟೆ. ಈ ಒಂದು ಹೇಳಿಕೆಯನ್ನು ಕೊಟ್ಟ ಮೇಲೆ ಸಂಬಂಧಪಟ್ಟ ಸರ್ಕಾರಿ ಆಜ್ಞೆಯನ್ನು ತಾವು ಹೊರಡಿಸಿದ್ದೀರಾ ? ಈ ಒಂದು ಸರ್ಕಾರಿ ಆಜ್ಞೆ ಬಂದಿಲ್ಲವೆಂದ ಮೇಲೆ ಇವರ ಹೇಳಿಕೆ ಸತ್ಯಕ್ಕೆ ಎಷ್ಟು ದೂರ ಇದೆ ಏನ್ನುವುದನ್ನು ತಾವೇ ಯೋಚನೆ ಮಾಡಬೇಕು ?

ಶ್ರೀ ಎ. ಲಕ್ಷ್ಮೀಸಾಗರ್.—ಸತ್ಯಕ್ಕೆ ಇದು ಪಕ್ಕದಲ್ಲಿಯೇ ಇದೆ.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಮುಖ್ಯಮಂತ್ರಿಗಳು ಬೆಳಿಗ್ಗೆ ಉತ್ತರ ಕೊಡುವಾಗ ಭೂಮಿಗೂ ಚಂದ್ರಲೋಕಕ್ಕೆ ಎಷ್ಟು ದೂರ ಇದೆ ಎಂದರೆ ಏನು ಉತ್ತರಿಸಿದರು ಆ ರೀತಿಯಲ್ಲಿ ನಾನೂ ಹೇಳಬೇಕಾಗಿದೆ Kindly supply me with the Government Order so that I can stand corrected.

ಈ ಇಲಾಖೆಯನ್ನು ತಾವು ಇಂಡಿಪೆಂಡೆಂಟ್ ಮಾಡಿ ಅದಕ್ಕೆ ಬೇಕಾದಂಥ ಸಿ ಆಂಡ್ ಆರ್ ರೂಲ್ಸ್‌ನ್ನು ಮಾಡಿ ಅದು ಸರ್ವ ಸ್ವತಂತ್ರವಾಗಿ ಕೆಲಸ ಮಾಡತಕ್ಕ ರೀತಿಯಲ್ಲಿ ಒಂದು ವಾತಾವರಣವನ್ನು ತಾವು ಕಲ್ಪಿಸಬೇಕಾಗಿದೆ. I will beone with you to feel happy about the matter. I will thank you once again and I will be happy if you kindly provide me with the Government order.

ನಾನು ಈ ಸಮಯದಲ್ಲಿ ಮತ್ತೊಂದು ವಿಷಯವನ್ನು ಮಾನ್ಯ ಸಂಸದೀಯ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಲೋಕಸಭೆಯಲ್ಲಿ ಇದಕ್ಕೆ ಸಂಬಂಧಪಟ್ಟ ಹಾಗೆ ಏನು ಪ್ರೊಸೀಜರ್‌ನ್ನು ಅಡಾಪ್ಟ್ ಮಾಡುತ್ತಿದ್ದಾರೋ ಅದನ್ನೇ ನೀವು ಇಲ್ಲಿ ಮಾಡಬೇಕು. ಇದು ನನ್ನ ನಮ್ರವಾದ ಸಲಹೆ. ಪೂರ್ತಿಯಾಗಿ ಮೊದಲಿಂದ ಕೊನೆಯವರೆಗೆ ಅದು ಯಾವ ರೀತಿಯಲ್ಲಿ ಕೆಲಸ ಮಾಡುತ್ತಿದೆಯೋ ಆ ರೀತಿಯಲ್ಲಿ ಅಡಾಪ್ಟ್ ಮಾಡಿಕೊಳ್ಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಆರ್ಟಿಕಲ್ 153ನ್ನು ನೋಡಿದ್ದೀರಾ ?

ಶ್ರೀ ವೈ. ರಾಮಕೃಷ್ಣ.—ನಮ್ಮ ಕಾಲದಲ್ಲಿ ಏನು ಈ ಆರ್ಟಿಕಲ್ ಇತ್ತೋ ಅದೇ ನಿಮ್ಮ ಕಾಲದಲ್ಲಿಯೂ ಇದೆ.

ಶ್ರೀ ಎ. ಲಕ್ಷ್ಮೀಸಾಗರ್.—ತಾವು ನಿಧಾನವಾಗಿ ಅದನ್ನು ಓದಿಕೊಂಡು ಬಂದು ನಂತರ ಇಲ್ಲ ನಾವು ಅಲ್ಲಿ ಮಾಡಿದ ಹಾಗೆ ಮಾಡಿ ಎಂದು ಹೇಳಿ. ನಾವು ಆ ರೀತಿಯಾಗಿ ಮಾಡುವುದಕ್ಕಾಗುತ್ತದೆಯೇ ?

SRI. Y. RAMAKRISHNA.—You can keep my suggestion in view when you make it quite independent.

ಸನ್ಮಾನ್ಯ ಅಧ್ಯಕ್ಷರೇ, ಈ ಸಭೆ ಸದಾ ಕಾಲದಲ್ಲಿ ಸೇರಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಲೆಜಿಸ್ಲೇಚರ್ ಕಮಿಟಿಗಳನ್ನು ತಾವು ಮಾಡಿದ್ದೀರಿ. ಈ ಕಮಿಟಿಯ ಸದಸ್ಯರಿಗೆ ಆದಂಥ ಅನುಭವವನ್ನು ನಾನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ತಾವು ವಿಧಾನಮಂಡಲವನ್ನು ಸ್ವತಂತ್ರ್ಯವಾಗಿ ಮಾಡಿದ್ದೀರಿ ಎಂದು ಹೇಳುತ್ತಿದ್ದೀರಿ. ಇದರ ಬಗ್ಗೆ ನಾನು ಒಂದು ಮಾತನ್ನು ಇಲ್ಲಿ ಹೇಳುತ್ತೇನ. ಲೋಕಸಭೆಯ ಪೆಡ್ಯೂಲ್ಡ್ ಕ್ಯಾಸ್ಟ್ ಕಮಿಟಿಯವರು ಇಲ್ಲಿಗೆ ಬಂದಿದ್ದರು. ಅವರನ್ನು ನಮ್ಮ ರಾಜ್ಯದ ಪೆಡ್ಯೂಲ್ಡ್ ಕ್ಯಾಸ್ಟ್ ಕಮಿಟಿಯವರು ಭೇಟಿ ಮಾಡಬೇಕು ಎಂದು ಹೇಳಿಬಿಟ್ಟು ಭೇಟಿಯ ಬಗ್ಗೆ ಎರಡು ದಿವಸ ವಿಶೇಷವಾಗಿ ಕೂತು ಒಂದು ಮೆಮೊರ್ಯಾಂಡಂನ್ನು ತಯಾರು ಮಾಡಿ, ಅವರಿಂದ ಇಂಟರವ್ಯೂ ತೆಗೆದುಕೊಂಡು ನಮಗೆ

ತಿಳಿಸಬೇಕು ಎಂದು ಸರ್ಕಾರಕ್ಕೆ ಹೇಳಿದ್ದಾರೆ. ಸರ್ಕಾರದವರು ಉತ್ತರವಾಗಿ ಲೆಜಿಸ್ಲೇಚರ್‌ಗೆ ಪತ್ರವನ್ನು ಬರೆದವರು. ನಾವು ಮಾತನಾಡಿದ್ದೇವೆ. ಇಷ್ಟು ಗಂಟೆಗೆ ತಮಗೆ ಇಂಟರ್‌ವ್ಯೂ ಫಿಕ್ಸ್ ಆಗಿದೆ ಅಶೋಕ ಹೋಟೆಲ್‌ಗ್ಗೆ ದಯವಿಟ್ಟು ಬರಬೇಕು ಎಂದು ತಿಳಿಸಿದರು.

ಶ್ರೀ ಎಂ. ಎಸ್. ಕೃಷ್ಣನ್.—ಅಶೋಕ ಹೋಟೆಲಿನಲ್ಲಿದ್ದರೋ ?

ಶ್ರೀ ವೈ. ರಾಮಕೃಷ್ಣ.—ಅಲ್ಲಿಗೆ ಬರಬೇಕು ಎಂದು ಹೇಳಿದರು. ನಾವು ಇದಕ್ಕಾಗಿ ಎರಡು ದಿವಸ ಇಲ್ಲಿ ಕೂತುಕೊಂಡು ತಲೆ ಕೆಡಿಸಿಕೊಂಡು ಮೆಮೋರ್ಯಾಂಡಂ ತಯಾರು ಮಾಡಿ ಮಾರನೆಯ ದಿವಸ ಬೆಳಿಗ್ಗೆ 12 ಜನ ಕಮಿಟಿಯ ಸದಸ್ಯರು ಅಶೋಕ ಹೋಟೆಲ್‌ಗೆ ಹೋದೆವು. ಅಲ್ಲಿಗೆ ಹೋದರೆ ನಮ್ಮ ಇಂಟರವ್ಯೂ ಫಿಕ್ಸ್ ಆಗಿಲ್ಲ. ಅವರು ನಮ್ಮನ್ನು ನೋಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಇದನ್ನು ಇವರು ಯಾರಿಗೆ ಹೇಳಬೇಕು ತಾವೇ ಆಲೋಚನೆ ಮಾಡಿ. ನಮ್ಮ ಲೆಜಿಸ್ಲೇಚರ್ ಸೆಕ್ರೆಟರಿಯವರು ಹೇಳುವಕ್ಕೆ ಚೀಫ್ ಸೆಕ್ರೆಟರಿಯವರು ಪತ್ರ ಬರೆದರು. ಬಹುಶಃ ಚೀಫ್ ಸೆಕ್ರೆಟರಿಯವರಿಗೆ ಇಂಟಿಮೇಟ್ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಇದು ಯಾವಾಗ ಆಗಿದ್ದು.

ಶ್ರೀ ವೈ. ರಾಮಕೃಷ್ಣ.—ಒಂದು ತಿಂಗಳ ಹಿಂದೆ. ಫೈರ್ ಇವರೆ ಚೀಫ್ ಸೆಕ್ರೆಟರಿಗೆ ಕಳಿಸಿ. ಯಾರು ಬೇಡ ಎಂದು ಹೇಳುತ್ತಾರೆ. ಇವಕ್ಕೆ ರಾಹುಕಾಲ, ಗುಳಿಕಾಲ ನೋಡಬೇಕೆ. ಮಾಡಿರುವುದು ತಪ್ಪು. ಎನ್‌ಕ್ವೈರಿ ಮಾಡಿಸುವುದಕ್ಕೆ ಕಳಿಸಿ. ನಾವು ಕಮಿಟಿಯಲ್ಲಿ ನಿರ್ಣಯ ಮಾಡಿದ್ದೇವೆ. ಇದು ಈ ಸಮಿತಿಗೆ ಆಗತಕ್ಕ ಅಪಮಾನ. ಇವರ ಬಗ್ಗೆ ನಾವು ಏನು ಮಾಡಬೇಕು ಎನ್ನುವುದರ ಬಗ್ಗೆ ಚೀಫ್ ಮಿನಿಸ್ಟರಿಗೆ ಕಾಗದ ಬರೆದಿರಬೇಕು. We have authorised the Chairman of the Committee to write a letter to the Chief Minister. ಇದನ್ನು ಏಕೆ ಹೇಳುತ್ತೇನೆ ಅಂದರೆ ಸದಸ್ಯರನ್ನಾಗಲಿ, ಸಮಿತಿಗಳನ್ನಾಗಲಿ ಲಘುವಾಗಿ ನೋಡತಕ್ಕ ಮನೋಭಾವ ಹೋಗಬೇಕು ಎಂದು. ಜನತೆಯಿಂದ ನೇರವಾಗಿ ಆಯ್ಕೆಯಾಗಿ ಬಂದ ಶಾಸಕರು ಯಾವುದೇ ಪಕ್ಷದವರು ಇರಲಿ. ಅವರು ಹೇಳುವುದರ ಬಗ್ಗೆ ಗಮನ ಹರಿಸಬೇಕು. ಸೆಕ್ರೆಟರಿ ಲೆವೆಲ್‌ನಲ್ಲಿ ಏಕೆ ಹೀಗಾಯಿತು. ನಾನಾ ದೇಶದ ನಾನಾ ಭಾಗಗಳಿಂದ ಬಂದು ಎರಡು ದಿವಸಗಳ ಕಾಲ ಮೆಮೊರ್ಯಾಂಡಂ ತಯಾರುಮಾಡಿ ಅದನ್ನು ಒಪ್ಪಿಸುವುದಕ್ಕೆ. ಹೋಗುವಾಗ ಫಿಕ್ಸ್ ಆಗಿಲ್ಲ ಅಂದರೆ ಈ ಸಮಿತಿಯ ಘನತೆ ಗೌರವ ಏನಾಗಬೇಕು ಎನ್ನುವುದನ್ನು ಮಾನ್ಯ ಪಾರ್ಲಿಮೆಂಟರಿ ಮಿನಿಸ್ಟರ್ ಹೇಳಬೇಕು. ಆದ್ದರಿಂದ ಅವರ ಬಗ್ಗೆ ಎನ್‌ಕ್ವೈರಿ ಮಾಡಿಸಿ. Kindly see that such things are not repeated in future. ನಾವು ಇದನ್ನು ಬಹಳ ಮನಸ್ಸಿಂದ ತಮ್ಮ ಗಮನಕ್ಕೆ ತರುತ್ತಿದ್ದೇವೆ.

ಇನ್ನು ವಿಧೇಯಕಗಳನ್ನು ತಯಾರು ಮಾಡತಕ್ಕಂಥಾದ್ದು. ನೀವು ಒಂದು ನಿರ್ಣಯ ತೆಗೆದುಕೊಂಡಿರಿ. ಏನೆಂದರೆ. ಇನ್ನು ಮುಂದೆ ಕನ್ನಡದಲ್ಲೇ ಪ್ರತಿಯೊಂದು ವ್ಯವಹಾರವನ್ನೂ ನಡೆಸತಕ್ಕದ್ದು ಎಂದು ಶಾಸನಸಭಾ ಕಾರ್ಯಕಲಾಪಗಳನ್ನು ಅಂದರೆ ವಿಧಾನಸೌಧದ ಲೆವೆಲ್‌ನಿಂದ ಹಿಡಿದು ತಾಲ್ಲೂಕುಮಟ್ಟದ ತನಕ ಎಲ್ಲಾ ಕನ್ನಡದಲ್ಲೇ ವ್ಯವಹರಿಸಬೇಕು ಎಂದು ಒಂದು ಸಲ ಅಲ್ಲ ಹತ್ತು ಸಾರಿ ಹೇಳಿದಿರಿ : ನಾವು, ಸಂತೋಷಪಟ್ಟೆವು. ಅಡ್ಮಿನಿಸ್ಟ್ರೇಟೀವ್ ರಿಪೋರ್ಟ್‌ನಲ್ಲಿ ಒಂದು ವಿಭಾಗವನ್ನು ತೆಗೆದಿದ್ದೇವೆ ಎಂದು ಹೇಳಿದ್ದೀರಿ. You have opened a wing. A separate Kannada wing has been created in Government Order dated 19th January, 1983..... ಜನವರಿ ತಿಂಗಳಲ್ಲಿ ಈ ವಿಭಾಗವನ್ನು ತೆಗೆದು ಇಲ್ಲಿಯವರೆಗೆ ಕೂಡ ಕನ್ನಡದಲ್ಲಿ ಒಂದೇ ಒಂದು ವಿಧೇಯಕವನ್ನು ಮಂಡಿಸಿದ್ದೀರಾ ? ಪೇಪರಿನಲ್ಲಿ ಈ ಬಗ್ಗೆ ತುಂಬಾ ಬಂದುಬಿಟ್ಟಿತು. ಜನವರಿ ತಿಂಗಳಲ್ಲಿ ಈ ವಿಭಾಗವನ್ನು ತೆಗೆದಿದ್ದೀರಿ, ಹಿಂದೆ 5 ವಿಭಾಗಗಳು ಇತ್ತು. ಅದರ ಜೊತೆಗೆ ಈ ವಿಂಗನ್ನು ಸೇರಿಸಿದಿರಿ. ಮತ್ತು ಕೋಡಿಫಿಕೇಷನ್. ವಿಂಗ್. ಈ ಎರಡನ್ನೂ ಸೇರಿಸಿದಿರಿ. ಹಾಗಾದರೆ ಇವರ ಕಾರ್ಯವಿಧಾನವೇನು ? ಯಾತಕ್ಕೋಸ್ಕರ ನೀವು ಈ ಸಭೆಯಲ್ಲಿ ಬಿಲ್ಲುಗಳನ್ನು ಕನ್ನಡದಲ್ಲಿ ಮಂಡಿಸುವುದಿಲ್ಲ. ತಾವು ದೊಡ್ಡ ದೊಡ್ಡ ಶಬ್ದಗಳನ್ನು, ಪದಗಳನ್ನು ಉಪಯೋಗಿಸಿಬಿಟ್ಟು ಬಿಲ್ಲುಗಳನ್ನು ತೆಗೆದುಕೊಂಡು ಬರುತ್ತೀರಿ. ಇದರಿಂದ ಜನರಿಗೆ ಏನು ಅರ್ಥವಾಗುತ್ತದೆ.

ಶ್ರೀ ಬಿ. ದೊಡ್ಡ ಬೋರೇಗೌಡ.—ರಸ್ತೆಗಳಲ್ಲಿ ಕನ್ನಡ ವಿಶ್ವಮೇಳ ಎಂದು ದೊಡ್ಡ ದೊಡ್ಡ ಬೋರ್ಡ್ ಹಾಕಿಸಿದ್ದಾರೆ.

ಶ್ರೀ ವೈ. ರಾಮಕೃಷ್ಣ.—ನಾನು ಆ ಜಾಗದಲ್ಲಿದ್ದಾಗ ಪ್ರಥಮವಾಗಿ ಕನ್ನಡದಲ್ಲಿ ವಿಧೇಯಕವನ್ನು ತೆಗೆದುಕೊಂಡು ಬಂದು ಓದಿದ್ದೇನೆ. ಅವರಿಗೆ ಗೊತ್ತಿದೆ. ದೇವದಾಸಿ ಪದ್ಧತಿಯನ್ನು ರದ್ದು ಮಾಡತಕ್ಕ ವಿಧೇಯಕವನ್ನು ಕನ್ನಡದಲ್ಲಿ ಮಂಡಿಸಿ ಓದುತ್ತೇನೆಂದು ನಾನು ಒಂದು ಆಶ್ವಾಸನೆ ಕೊಟ್ಟಿದ್ದೆ. ಮತ್ತು ಇನ್ನು ಮುಂದೆ ಬರತಕ್ಕ ಬಿಲ್ಲುಗಳನ್ನು ಕನ್ನಡದಲ್ಲಿ ತೆಗೆದುಕೊಂಡು ಬರುತ್ತೇನೆಂದು ಹೇಳಿದ್ದೆ. ತಾವು ಎಂಟು ತಿಂಗಳಾದರೂ ಕೂಡ ಕನ್ನಡದಲ್ಲಿ ಬಿಲ್ಲುಗಳನ್ನು ತರಲಿಲ್ಲ. ತಾವು ಸಾರ್ವಜನಿಕ ಮಹತ್ವವುಳ್ಳಂಥ ಬಿಲ್ಲುಗಳನ್ನು ತಂದಿರಿ, ಅದರ ಮೇಲೆ ವ್ಯಾಖ್ಯಾನ ಮಾಡಿದರೆ ಲೇಟಾಗುತ್ತದೆ. ಆದರೆ ತಾವು ಕನ್ನಡದಲ್ಲಿ ಏಕೆ ತರಲಿಲ್ಲ ಎಂದು ಕೇಳುತ್ತೇನೆ. ತಾವು ಅನುಮತಿ ಕೊಟ್ಟರೆ ನಾನು ಒಂದು ಉದಾಹರಣೆ ಕೊಡುತ್ತೇನೆ. ಇಲ್ಲೊಂದು ವಿಧೇಯಕ ಇದೆ. Karnataka Educational Institutions (Prohibition of Capitation Fee Bill, 1983. ತಾವೇ ಸ್ಕ್ರೂಟಿನಿ ಕಮಿಟಿ ಛೇರ್ಮನ್ನಾಗಿ ತಯಾರು ಮಾಡಿದಿರಿ. ಎಷ್ಟು ಜನ ಶಾಸನಸಭಾ ಸದಸ್ಯರಿಗೆ ಇದರು ಕ್ಲಾಸುಗಳು ಅರ್ಥವಾಗುತ್ತವೆ ಎಂದು ಯೋಚನೆ ಮಾಡಿದ್ದೀರಾ. ಕ್ಲಾಸ್–3 ತೆಗೆದುಕೊಳ್ಳಿ, ಇದರಲ್ಲಿ ಒಂದು ಸೆಂಟೆನ್ಸ್ 17 ಲೈನ್ ಇದೆ. ಇದನ್ನು ಓದುತ್ತೇನೆ ಕೇಳಿ :

> " Notwithstanding anything contained in any law for the time being in force, no capitation fee shall be collected by or on behalf of any educational institution or by any person who is incharge of or is responsible for the management of such institution :
>
> Provided that subject to such rules as may be prescribed or such conditions as may be specified by general or special order from time to time, the Government may, notwithstanding anything contained in this Act permit any educational institution established before the date of commencement of this Act and maintained solely or substantially out of amounts collected as capitation fee or any class or classes of such institutions, to continue to receive such capitation fee or cash deposits in such manner to such extent and for such period as the Government may, by order specify, so however that such period shall not in any case extend beyond five years from such date. "

ಇದಿಷ್ಟೂ ಒಂದೇ ಸೆಂಟೆನ್ಸ್.

ಶ್ರೀ ವಿ. ಎಸ್. ಆಚಾರ್ಯ.—ಇದು ಕನ್ನಡದಲ್ಲಿದ್ದರೂ ಅರ್ಥವಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಕಲ್ಲು ಎನ್ನುವುದಕ್ಕೆ ಒಬ್ಬ ಕವಿ ಹೀಗೆ ಹೇಳುತ್ತಾನೆ. ಚಂಚತ್ ಚಾಕಚಕ್ಯ... ಲೋಚನ ವಿಜಯಾಂ. ಹೀಗೆ ಇರಬೇಕು ಸಮಾಚಾರ.

ಶ್ರೀ ಲಕ್ಷ್ಮೀಸಾಗರ್.—ಐ.ಪಿ.ಸಿ. ಸೆಕ್ಷನ್ 499 ಸ್ವಲ್ಪ ಓದಿ.

Don't shirk your responsibility.

ಶ್ರೀ ವೈ. ರಾಮಕೃಷ್ಣ.—ನೀವು ಮಾಡಿದ ಕಾನೂನನ್ನು ನಾನು ಹೇಳುತ್ತಾ ಇದ್ದೇನೆ. ನಾನು ಇದ್ದಾಗ ಸರಿಯಾಗಿತ್ತು ಎಂದು ಹೇಳುತ್ತಾ ಇಲ್ಲ. I am not criticising you. ನಾವು ಮಾಡತಕ್ಕಂಥ ಶಾಸನ ಕನ್ನಡದಲ್ಲಿದ್ದರೆ ಸಾಲದು, ಅದು ಅರ್ಥವಾಗತಕ್ಕಂಥ ಕನ್ನಡದಲ್ಲಿರಬೇಕು, ಸುಲಭವಾಗಿ ಅರ್ಥವಾಗತಕ್ಕಂಥ ಕನ್ನಡದಲ್ಲಿರಬೇಕು, ದಿನನಿತ್ಯದ ಭಾಷೆಯನ್ನು ಬಳಸಬೇಕು, ಸಣ್ಣ ಸಣ್ಣ ವಾಕ್ಯಗಳನ್ನು ತಾವು

ಬಳಸಬೇಕು. ಆಗ ಆ ವಾಕ್ಯಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಆಗುತ್ತದೆ. ಇಲ್ಲಿ ಬಂದಿರತಕ್ಕ ಸದಸ್ಯರು ಅವರ ಬಗ್ಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುವುದಕ್ಕೆ ಅವಕಾಶವಾಗುತ್ತದೆ. It is the hard truth I am placing before you. ನಾನು ಆಗಲೇ ಓದಿದ್ದು 17 ಲೈನಿನ ಒಂದೇ ಒಂದು ಸೆಂಟೆನ್ಸ್. ಇಲ್ಲಿ ಇನ್ನೊಂದು ಸೆಂಟೆನ್ಸ್ ಸೆಕ್ಷನ್ 8 ರಲ್ಲಿ 31 ಲೈನ್ ಇದೆ. ಅದನ್ನು ಸ್ವಲ್ಪ ಓದಿಬಿಡುತ್ತೇನೆ.

> "Offence by companies :—(1) Where an offence against any of the provisions of this Act or any rule made thereunder has been committed by a company, every person who at the time of the offence was committed, was incharge of and was responsible to the company for the conduct of business of the company, as well as the company, shall be deemed to be guilty of the offence and shall be liable to be proceeded against and punished accordingly.
>
> Provided that nothing coutained in this sub-section shall render any such person liable to any punishment if he proves that the offence was committed without his knowledge or that he has exercised all due diligence to prevent the commission of such offence."

ಇದು ಏಕೆ ಸ್ವಾಮಿ. ಇಂಗ್ಲಿಷ್ ಹುಟ್ಟಿದ ಇಂಗ್ಲೆಂಡ್‌ನಲ್ಲೂ ಇಂತಹ ಭಾಷೆಯನ್ನು ಉಪಯೋಗಿಸುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನೀವು ಇದ್ದಾಗ ಯಾವ ಸೆಕ್ರೆಟರಿ ಮಾಡಿದರೋ ಅದೇ ಸೆಕ್ರೆಟರಿ ಇದನ್ನೂ ಮಾಡಿರುವುದು.

SRI Y. RAMAKRISHNA.—He is the Chairman of the Scrutiny Committee. ಇದನ್ನು ಹೇಳಬೇಕಾಗಿತ್ತು. ಒಂದಲನೇ ತಪ್ಪು ಕನ್ನಡದಲ್ಲಿ ಮಾಡಿದೇ ಇರತಕ್ಕಂಥದ್ದು. ಎರಡನೇ ತಪ್ಪು ಕೇಳಿ ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಈ ದೇಶದ ಮತ್ತು ರಾಜ್ಯದ ಹಾಗೂ ಪ್ರಪಂಚದ ಎಲ್ಲಾ ಕಾನೂನುಗಳನ್ನೂ ಇದೇ ರೀತಿ ಮಾಡುವುದು. ಇದನ್ನು ಬಿಟ್ಟು ಬೇರೆ ರೀತಿಯಲ್ಲಿ ಮಾಡತಕ್ಕಂಥ ಶಕ್ತಿಯನ್ನು ನೀವೇನಾದರೂ ನಮಗೆ ತೆಗೆದುಕೊಟ್ಟರೆ ನಾನು ಅದನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುವುದಕ್ಕೆ ಸಿದ್ಧನಿದ್ದೇನೆ. ಆದರೆ ಅದೆಲ್ಲಾ ಕಾನೂನಿಗೆ ಅನುಗುಣವಾಗಿರಬೇಕು, ಸಂವಿಧಾನಾತ್ಮಕವಾಗಿರಬೇಕು, ಯಾವ ಉದ್ದೇಶಕ್ಕೋಸ್ಕರ ಕಾನೂನು ಮಾಡುತ್ತೇವೋ ಆ ಉದ್ದೇಶವನ್ನು ಸಫಲಗೊಳಿಸತಕ್ಕ ರೀತಿಯಲ್ಲಿ ಕಾನೂನು ಮಾಡತಕ್ಕಂಥ ಅವಶ್ಯಕತೆ ಇದ್ದರೆ ನೀವು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಗದುಗಿನ ನಾರಾಯಣಪ್ಪ "ಸುಲಭವಾಗಿಪ್ಪ ಕನ್ನಡ ನುಡಿಯೊಳು ಕಾವ್ಯ ಬರೆದರೆ ಸಾಲದೆ ಸಂಸ್ಕೃತದೊಳು ಇನ್ನೇನು ಎಂದು" ಹೇಳಿಬಿಟ್ಟು ಬರೀ ಸಂಸ್ಕೃತದ ಶಬ್ದ ವಾಕ್ಯಗಳನ್ನು ಅದರಲ್ಲಿ ತುಂಬಿದ್ದಾನೆ. ನಿಮ್ಮ ಅಭಿಪ್ರಾಯ ಮತ್ತು ತತ್ವವನ್ನು ನಾನು ತಿಳಿದುಕೊಂಡಿದ್ದೇನೆ.

ಶ್ರೀ ವೈ. ರಾಮಕೃಷ್ಣ.—ತಾವು ಮಾಡಿರುವ ತಪ್ಪನ್ನು ಮುಚ್ಚಿಕೊಳ್ಳುವುದಕ್ಕೆ ಗದುಗಿನ ನಾರಾಯಣಪನನ್ನು ಏಕೆ ತೆಗೆದುಕೊಂಡು ಬರುತ್ತೀರಿ. ತಾವು ಮಾಡಿರುವಂಥ ತಪ್ಪನ್ನು ಮುಚ್ಚಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಿ. ತಾವು ಇನ್ನುಮುಂದೆ ಕನ್ನಡದಲ್ಲಿಯೇ ವಿಧೇಯಕಗಳನ್ನು ತಯಾರಿಸುತ್ತೇನೆ, ಸುಲಭ ಕನ್ನಡದಲ್ಲಿ ಸದಸ್ಯರುಗಳಿಗೆ ವಿಧೇಯಕಗಳನ್ನು ಒದಗಿಸಿಕೊಡುತ್ತೇವೆಂದು ಹೇಳಿದಿರಿ. ಈ ದಿಸೆಯಲ್ಲಿ ತಾವು ಏನು ಮಾಡಿದ್ದೀರೆಂಬುದನ್ನು ಸಭೆಗೆ ತಿಳಿಸಬೇಕೆಂದು ಹೇಳುತ್ತೇನೆ. ಚುನಾವಣಾ ಪ್ರಣಾಳಿಕೆಯನ್ನು ಅಚ್ಚಕನ್ನಡದಲ್ಲಿ ತಿಳಿಯಾದ ಕನ್ನಡದಲ್ಲಿ ಯಾವ ರೀತಿ ಬರೆಸುತ್ತೀರಿ ಆದೇ ರೀತಿ ಮಾನ್ಯ ಸದಸ್ಯರುಗಳಿಗೆ ಸುಲಭವಾದ ಕನ್ನಡದಲ್ಲಿ ವಿಧೇಯಕಗಳನ್ನು ಒದಗಿಸುವುದಕ್ಕೆ ತಾವು ಏತಕ್ಕೆ ಪ್ರಯತ್ನ ಮಾಡಲಿಲ್ಲ ?

ಜಾಸ್ತಿ ಟೀಕೆ ಟಿಪ್ಪಣಿಗಳು ಮಾಡುತ್ತಾರೆಂಬ ಆತಂಕದಿಂದ ಕನ್ನಡದಲ್ಲಿ ಬರೆಸಲಿಲ್ಲವೆ ? ಸ್ವಾಮಿ ಈ ಮಸೂದೆಯಲ್ಲಿ 15 ಸಾಲುಗಳಿಂದ ಕೂಡಿದ ಒಂದು ವಾಕ್ಯ ಇದೆ.

ಶ್ರೀ ಎ. ಲಕ್ಷ್ಮೀಸಾಗರ್.—ಆರ್ಟಿಕಲ್ 153 ತೆಗೆದುಕೊಳ್ಳಿ.

ಶ್ರೀ ವೈ. ರಾಮಕೃಷ್ಣ.—ಇನ್ನೊಂದು ಕಡೆ 14 ಸಾಲಿನ ವಾಕ್ಯ ಇದೆ. ತಾವು ಸಭೆಗೆ ಆಶ್ವಾಸನೆ ಕೊಡಿ. ಸ್ಪೆಷಲ್ ರೆಕ್ಕೂಟ್ ಮಾಡಿ ಇದನ್ನು ಸರಿಪಡಿಸುತ್ತೇವೆಂದು ಹೇಳಿ. ನಾವು ಈ ವಿಚಾರದಲ್ಲಿ ತಮಗೆ ಅಡ್ಡಿ ಬರುವುದಿಲ್ಲ. ಕನ್ನಡದಲ್ಲಿಯೇ ವಿಧೇಯಕವನ್ನು ತೆಗೆದುಕೊಂಡು ಬನ್ನಿ. ಇನ್ನು ಕೆಲವಾರು ಸುಧಾರಣೆಗಳ ಬಗ್ಗೆ ಸಜೆಷನ್ ಮಾಡಿದ್ದೀರಿ. ನಾನು ಕೂಡ ಅಲ್ಲಿ ಕೂತುಕೊಂಡಿದ್ದಾಗ, ಏತಕ್ಕೆ ಮಾಡಬಾರದು ಎಂದು ಯೋಚನೆ ಮಾಡಿದ್ದೆ. ಟೇಪ್ ರೆಕಾರ್ಡಿಂಗ್ ಇಂಟರ್‌ಡ್ಯೂಸ್ ಮಾಡಬೇಕು ; ರೇಡಿಯೋದಲ್ಲಿ ರಿಲೇ ಮಾಡಿಸಬೇಕು ; ಎಂದು ಹೇಳಿದ್ದಿರಿ, ತಾವು ಅಧಿಕಾರಕ್ಕೆ ಬಂದು 7–8 ತಿಂಗಳಾಗುತ್ತಾ ಬಂತು ; ಈ ವಿಚಾರದಲ್ಲಿ ಏನು ಕ್ರಮ ಕೈಗೊಂಡಿದ್ದೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಕೇಂದ್ರ ಸರ್ಕಾರದ ವಾರ್ತಾಮಂತ್ರಿಗಳು ಒಪ್ಪಿಕೊಂಡರೆ ನನ್ನ ಅಭ್ಯಂತರ ಏನೂ ಇಲ್ಲ.

ಶ್ರೀ ವೆ . ರಾಮಕೃಷ್ಣ.—ಒಪ್ಪಿಸುವುದು ತಮ್ಮ ಜವಾಬ್ದಾರಿ. ಇವತ್ತು ಅನೇಕ ಶಾಸನ ಸಭೆಗಳನ್ನು ನೋಡಿದ್ದೇವೆ. ಇಷ್ಟು ಸುಂದರವಾದ ಶಾಸನ ಸಭೆ, ರಮ್ಯವಾಗಿರತಕ್ಕ ಸಭೆ ರಾಷ್ಟ್ರದಲ್ಲಿ ಎಲ್ಲಿಯೂ ಇಲ್ಲ ಹೊರಗಡೆ ದೇಶದಲ್ಲಿಯೂ ಇಲ್ಲ.

ಶ್ರೀ ಹೆಚ್. ಗಂಗಾಧರನ್.—ಕಳೆದ ಸಭೆಯಲ್ಲಿ ನಾನು ಹೇಳಿದ್ದೆ ; ಇದರ ಬಗ್ಗೆ ತಾವು ಏನಾದರೂ ಪ್ರಯತ್ನ ಮಾಡಿದ್ದೀರಾ ?

ಶ್ರೀ ವೈ. ರಾಮಕೃಷ್ಣ.—ನಮ್ಮ ಸರ್ಕಾರ ಇದ್ದರೆ ಮಾಡುತ್ತಿದ್ದೆವು. ಈಗ ನಿಮ್ಮ ಸರ್ಕಾರ ಇದೆ ಮಾಡಿಸಿ. ಇವತ್ತು ಟಿ.ವಿ. ಒಳಗೆ ರಿಲೇ ಮಾಡುವುದಕ್ಕೂ ಅನುಕೂಲ ಇದೆ.

ಶ್ರೀ. ಕೆ. ಜಿ. ಮಹೇಶ್ವರಪ್ಪ.—ಧರಣಿ ಒಂದನ್ನು ಬಿಟ್ಟು.

ಶ್ರೀ ವೈ. ರಾಮಕೃಷ್ಣ.—ಕಾರ್ಯಕಲಾಪದಲ್ಲಿ ಅದು ಕೂಡ ಸೇರುತ್ತದೆ. ಈ ವಿಷಯದಲ್ಲಿ ತಾವು ಪ್ರಾಮಾಣಿಕ ಪ್ರಯತ್ನ ಏನು ಮಾಡಿದ್ದೀರಿ ?

ಶ್ರೀ ಎಂ. ಎಸ್. ಕೃಷ್ಣನ್.—ನಮ್ಮ ಪಕ್ಷದ ವತಿಯಿಂದ ಟಿ.ವಿ.ಯಲ್ಲಿ ಈ ಸಭೆಯ ಕಾರ್ಯಕಲಾಪಗಳನ್ನು ರಿಲೇ ಮಾಡುವುದರ ಬಗ್ಗೆ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರುವುದಕ್ಕೆ ಏರ್ಪಾಡು ಮಾಡಲಾಗುವುದು. ನಮ್ಮ ಜೊತೆಯಲ್ಲಿ ತಾವು ಬರುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಮಾಡಿ, ಹೋದ ವರ್ಷ ಭಾಷಣ ಮಾಡಿದ್ದು, ಅಂದರೆ ಈ ಸಭೆಯ ಕಾರ್ಯಕಲಾಪಗಳು ಇದುವರೆವಿಗೂ ಮುದ್ರಣವಾಗಿಲ್ಲ, ಇದಕ್ಕೆ ಕಾರಣ ಏನು ? ಏತಕ್ಕೋಸ್ಕರ ಡಿಲೆಯಾಯಿತು? ಮುದ್ರಣಾಲಯದಲ್ಲಿ ಡಿಲೆಯಾಯಿತೋ ? ಅಥವಾ ತಮ್ಮ ಸಂತೋಷದಲ್ಲಿ ಇದನ್ನು ಮರೆತುಬಿಟ್ಟರೋ ? ಇದರ ಬಗ್ಗೆ ತಾವು ಸ್ಪಷ್ಟೀಕರಣ ಕೊಡಬೇಕು.

SRI. A. LAKSHMISAGAR —Sir, Administrative Reforms Commission set up by the Govt. of India has, among other things, recommended that the Department Organisation both at the Centre and the States which are in charge of developmental programmes should prepare performance budgeting.

ಶ್ರೀ ವೈ. ರಾಮಕೃಷ್ಣ.—ತಾವು ಮೂರು ಖಾತೆಗಳನ್ನು ವಹಿಸಿಕೊಂಡಿದ್ದೀರಿ. ಹೌಸಿಂಗ್ ಸಂಬಂಧ ಪಟ್ಟಂತೆ ಎಲ್ಲವೂ ಸರಿಯಾಗಿದೆ. ಆದರೆ, ಶಾಸಕಾಂಗದ ಬಗ್ಗೆ ಸರಿಯಾದ ವಿವರಗಳನ್ನು ನೀಡಿಲ್ಲ. ನಾನು ಒಂದು ಮಾತು ಹೇಳುತ್ತೇನೆ ; ಎಲ್ಲಿಯವರೆಗೆ ಶಾಸಕಾಂಗ ಚೆನ್ನಾಗಿ ಕೆಲಸ ಮಾಡುತ್ತದೆ ಅಲ್ಲಿಯವರೆಗೆ ಪ್ರಜಾಪ್ರಭುತ್ವ ಚೆನ್ನಾಗಿರುತ್ತದೆ. ತಾವು ಮೊದಲು ಸಭೆಯಲ್ಲಿ ನಡೆದಂಥ ಕಾರ್ಯಕಲಾಪಗಳನ್ನು ಮುದ್ರಿಸಬೇಕಾಗಿತ್ತು. ತಾವು ಬರೀ ಪತ್ರಿಕೆಗಳಲ್ಲಿ ಹೇಳಿಕೆಗಳನ್ನು ಕೊಡುತ್ತಿದ್ದೀರೇ ಹೊರತು, ಕಾರ್ಯತಃ ಯಾವುದನ್ನೂ ಮಾಡುವುದಕ್ಕೆ ಹೋಗಿಲ್ಲ. ಇನ್ನು ಮುಂದಕ್ಕಾದರೂ ತಾವು ಎಲ್ಲ ವಿಚಾರಗಳನ್ನೂ ಕನ್ನಡದಲ್ಲಿಯೇ ಇರುವಂತೆ

ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡುತ್ತೇನೆ. ತಾವು ಇನ್ನೊಂದು ಪಬ್ಲಿಕ್ ಗ್ರಿವೆನ್ಸಸ್ ಖಾತೆ ಇಟ್ಟು ಕೊಂಡಿದ್ದೀರಿ. ಸಾರ್ವಜನಿಕ ಕುಂದುಕೊರತೆಗಳನ್ನು ಕೇಳುವುದಕ್ಕೆ ಅವರು ಒಂದು ಪ್ರೋಸ್ಪೆ ಆಫೀಸ್ ಇಟ್ಟು ಕೊಂಡಿದ್ದಾರೆ. ಗಂಡು ಕೊಡಿಸಬೇಕೆಂದರೆ ಕೊಡಿಸುವುದು. ಹೆಣ್ಣು ಕೊಡಿಸಬೇಕೆಂದರೆ ಕೊಡಿಸುವುದು...

ಶ್ರೀ ಎ. ಲಕ್ಷ್ಮೀಸಾಗರ್.—ನಿಮ್ಮ ಕಾಲದಲ್ಲಿ ಅರ್ಜಿಗಳು ಬುಟ್ಟಿಗೆ ಹೋಗುತ್ತಿದ್ದವು. ನಾವು ಅವುಗಳಿಗೆ ಉತ್ತರ ಕಳುಹಿಸುತ್ತಿದ್ದೇನೆ.

ಶ್ರೀ ವೈ. ರಾಮಕೃಷ್ಣ.—ನಾನು ಬೇಡಿಕೆಗಳ ಮೇಲೆ ಮಾತನಾಡುತ್ತಾ, ಅವರ ಪತ್ರಿಕಾ ಹೇಳಿಕೆಯನ್ನು ನೋಡಿ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಹಿಂದುಳಿದ ವರ್ಗದವರು, ಪರಿಜನರು ಕೊಟ್ಟಿರತಕ್ಕ ಅರ್ಜಿಗಳನ್ನು ಬುಟ್ಟಿಯೊಳಗಿಟ್ಟಿದ್ದಾರೆ, ಗಟಾರಕ್ಕೆ ಬಿಸಾಕಿದ್ದಾರೆಂದು ಹೇಳುತ್ತಾರೆ. ಅದು ಸರಿಯಲ್ಲ. ಅಂಥ ಒಂದು ನಿರ್ದಿಷ್ಟವಾದ ಉದಾಹರಣೆಯನ್ನು ತೋರಿಸಲಿ. ದಯವಿಟ್ಟು ಕೇಳಿ. ನೀವು ಏನು ಮಾಡಿದಿರಿ ಎಂದು ಅಲ್ಲ. ನಮ್ಮ ಸರ್ಕಾರ ಮಾಡಿದ್ದನ್ನು ಹೇಳುತ್ತೇನೆ; ಅದಕ್ಕೆ ಒಂದಲ್ಲ 4 ದಿನ ಚರ್ಚೆ ಇದೆ. ಪಾರ್ಲಿಮೆಂಟ್ ಮಂತ್ರಿಗಳು ಕೇಳುವುದಕ್ಕೆ ಆಸಕ್ತಿ ಇದ್ದರೆ ಇದಕ್ಕೆ ಪ್ರತ್ಯೇಕವಾಗಿ ಒಂದು ದಿನ ಚರ್ಚೆ ಇಡಲಿ. ಆದರೆ ಮೊದಲು ವರದಿಯನ್ನೆಲ್ಲ ಮುದ್ರಣ ಮಾಡಿಸಿ.

ಉಪಾಧ್ಯಕ್ಷರು.—ಪಬ್ಲಿಕ್ ಗ್ರಿವೆನ್ಸಸ್ ಇಲ್ಲ.

ಶ್ರೀ ವೈ. ರಾಮಕೃಷ್ಣ.—ಇಲ್ಲವೆಂದು ಸ್ಪಷ್ಟೀಕರಣ ನೀಡಲಿ. ಇದು ಲಕ್ಷ್ಮೀಸಾಗರ್‌ರವರ ನಾಯಕತ್ವದಲ್ಲಿ ಪ್ರಾರಂಭವಾಗಿರತಕ್ಕ ಹೊಸ ಇಲಾಖೆ. ಅವರು ಇದೆ ಎಂದು ಹೇಳುತ್ತಾರೆ. ತಾವು ಇಲ್ಲವೆಂದು ಹೇಳುತ್ತೀರಿ.

ಉಪಾಧ್ಯಕ್ಷರು.—ಖಾತೆ ಇದೆ. ಆದರೆ ಗ್ರಿವೆನ್ಸಸ್ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಖಾತೆ ಇದೆ. ಆದರೆ ಅದಕ್ಕೇನೂ ಹಣ ಕೇಳುತ್ತಿಲ್ಲ.

ಶ್ರೀ ವೈ. ರಾಮಕೃಷ್ಣ.—ಹಣಕಾಸಿನ ವ್ಯವಸ್ಥೆ ಇಲ್ಲದೆ ಇಲಾಖೆಯನ್ನು ತೆಗೆಯುವುದಾದರೂ ಹೇಗೆ? ಬಂದಂತಹ ಅರ್ಜಿಗಳನ್ನು ರಿಜಿಸ್ಟರ್ ಮಾಡಿಕೊಂಡು ಡೀಲ್ ಮಾಡುವುದಕ್ಕೆ ಕಾರ್ಯದರ್ಶಿ. ಉಪ ಕಾರ್ಯದರ್ಶಿ ಮಟ್ಟದ ಅಧಿಕಾರಿಗಳು ಬೇಡದಿದ್ದರೂ ಅಧೀನ ಕಾರ್ಯದರ್ಶಿಯವರ ಮಟ್ಟದವರಾದರೂ ಬೇಡವೆ? ಸೀರಿಯಸ್ ಮ್ಯಾಟರ್ಸ್ ಬಂದಾಗ ಅದನ್ನು ಎಲ್ಲಿ ಪ್ರೋಸೆಸ್ ಮಾಡಿಸುತ್ತೀರಿ? ಅದಕ್ಕೆ ಎಲ್ಲ ವ್ಯವಸ್ಥೆ ಇದೆ ಎಂದು ಹೇಳುವುದು ಬರೀ ಘೋಷಣೆ ಎಂದು ಕಾಣುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ತಿಳಿಯದೆ ಮಾತನಾಡುವುದು ಒಂದು ಭಾಗ; ಆದರೆ ತಿಳಿದುಕೊಂಡೂ ತಿಳಿಯದವರಂತೆ ಮಾತನಾಡುವುದು ಚೆನ್ನಾಗಿ ಕಾಣುವುದಿಲ್ಲ.

ಶ್ರೀ ವೈ. ರಾಮಕೃಷ್ಣ.—ಈ ಇಲಾಖೆಗೆ ದುಡ್ಡು ಬೇಕಾಗಿಲ್ಲ, ದುಡ್ಡು ವಿಚಾರಗಿಲ್ಲ ಎಂದಿರಿ. ಆದರೆ 59 ಜನ ಸಿಬ್ಬಂದಿ ತೆಗೆದುಕೊಂಡಿದ್ದಲ್ಲ ಅವಕ್ಕೆ ಯಾವ ಹೆಡ್‌ನಿಂದ ಕೊಟ್ಟಿರಿ?

ಶ್ರೀ ಎ. ಲಕ್ಷ್ಮೀಸಾಗರ್.—ಅದಕ್ಕೆ ಉತ್ತರ ಹೇಳುತ್ತೇನೆ.

ಶ್ರೀ ವೈ. ರಾಮಕೃಷ್ಣ.—ದುಡ್ಡು ವಿಚಾರಗಿಲ್ಲ ಅಂದರೆ ನಾವು ಏನು ತಿಳಿದುಕೊಳ್ಳಬೇಕು?

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಹೇಳಿದ್ದನ್ನು ಪೂರ್ಣ ತಿಳಿದುಕೊಳ್ಳುವುದಕ್ಕೆ ಸ್ನೇಹಿತರು ಪ್ರಯತ್ನ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಈ ಖಾತೆಗೆ ಸಂಬಂಧಪಟ್ಟ ಹಾಗೆ ಪ್ರತ್ಯೇಕವಾಗಿ ಹಣವನ್ನು ಕೇಳಿಲ್ಲವೆಂದರೆ ದುಡ್ಡಿಲ್ಲದೆ ಏನು ಕೆಲಸ ಮಾಡುತ್ತೀರೆಂದು ಅರ್ಥವಾಗುತ್ತದೆಯೆ? ಸಾರ್ವಜನಿಕ ಕುಂದು ಕೊರತೆಗಳನ್ನು ನಿವಾರಣೆ ಮಾಡುವುದಕ್ಕೆ ಹೇಗೆ ಪ್ರಯತ್ನ ನಡೆದಿದೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದರ ಬಗ್ಗೆ ಮಾಹಿತಿ ಇದ್ದರೆ ಕೊಡಿ. ತಿಳಿದುಕೊಂಡು ಹೇಳುತ್ತೇನೆಂಬುದು ಒಂದು ಭಾಗ. ಸಾರಾಸಗಟು ರೋಡ್ ರೋಲರ್ ಎಳೆದುಕೊಂಡು ಹೋದ ಹಾಗೆ ಹೋದರೆ ಪ್ರಯೋಜನವಾಗುವುದಿಲ್ಲ. ಅದರಿಂದ ನನಗೂ ಪ್ರಯೋಜನ ಇಲ್ಲ; ಅವರಿಗಂತೂ ಇಲ್ಲವೇ ಇಲ್ಲ.

ಶ್ರೀ ವೈ. ರಾಮಕೃಷ್ಣ.—ತಾವು ನನ್ನ ಭಾಷಣದ ಕೊನೆಯವರೆಗೆ ಇದಕ್ಕೆ ಉತ್ತರ ಕೊಡಿ. ಪಬ್ಲಿಕ್ ಗ್ರಿವೆನ್ಸಸ್ ಖಾತೆಯನ್ನು ಮಡಿಸಿಕೊಂಡ ಅವರಿಗೆ ಕೇಳಬೇಕೆಂಬ ತಾಳ್ಮೆ ಇಲ್ಲ. ನನಗೆ ಏನೇನು ಮಾಹಿತಿ ಬೇಕೋ ಎಲ್ಲ ಇದೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಕಾನೂನುಬದ್ಧನಾಗಿ ಹೇಳಿದ್ದೇನೆ; ನಿಯಮಾವಳಿಗನುಸಾರವಾಗಿ ಏನೇನು ಹೇಳಬೇಕೋ ಎಲ್ಲವನ್ನೂ ಹೇಳಿದ್ದೇನೆ.

ಶ್ರೀ ವೈ. ರಾಮಕೃಷ್ಣ.—ಅನೇಕಲ್‌ನಲ್ಲಿ ಏನು ದುರುಪಯೋಗದ ಪ್ರಕರಣ ನಡೆದಿದೆ ಅದರಲ್ಲಿ ಮಂತ್ರಿಗಳು ಭಾಗವಹಿಸಿದ್ದಾರೆಂದು ತಿಳಿದುಬಂದಿರುವುದರಿಂದ ತಾವು ಕೂಡಲೇ ಕ್ಷಮಾಪಣೆ ಕೇಳಬೇಕು

ಶ್ರೀ ಎ. ಲಕ್ಷ್ಮೀಸಾಗರ್.—ತನಿಖೆಯಾಗಿ ವರದಿ ಬರಲಿ.

ಶ್ರೀ ವೈ. ರಾಮಕೃಷ್ಣ.—ತನಿಖೆಯಾಗಿ ವರದಿ ಬಂದಿದೆ. ಇಲ್ಲಿ ಕುಳಿತಾಗ ಏನು ಮಾತನಾಡುತ್ತಿದ್ದರಿ ಅಲ್ಲಿಯೂ ಅದೇ ರೀತಿ ಮಾತನಾಡಬೇಕು. ಈಗ ನಮಗೇನು ಕಷ್ಟವೂ ಇಲ್ಲ, ಜವಾಬ್ದಾರಿಯೂ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಜವಾಬ್ದಾರಿ ಇಲ್ಲವೆ ನಿಮಗೆ ?

ಶ್ರೀ ವೈ. ರಾಮಕೃಷ್ಣ.—ಸರ್ಕಾರ ನಡೆಸುವ ಜವಾಬ್ದಾರಿ ನಮಗೆ ಇಲ್ಲವಲ್ಲ. ಸಂಸಾರ ನಿಡೆಸುವ ಜವಾಬ್ದಾರಿ ಇದೆ ಅನ್ನುತ್ತೀರಾ ? ತಾವು ಹೊಸ ಖಾತೆಯನ್ನು ತೆರೆದಿದ್ದೀರಿ, ಸಂತೋಷ. ಇಂಥ ಖಾತೆ ಬೇರೆ ಯಾವ ರಾಜ್ಯದಲ್ಲಿದೆಯೋ ಗೊತ್ತಿಲ್ಲ. ತಾವು ತೆಗೆದುಕೊಂಡಿರುವ ಜವಾಬ್ದಾರಿ ಹೆಣ್ಣುಗಳಿಗೆ ಗಂಡುಗಳನ್ನು ಹುಡುಕಬೇಕು, ಗಂಡುಗಳಿಗೆ ಕೆಲಸ ಕೊಡಿಸಬೇಕು, ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಫೇಲ್ ಆಗಿದ್ದರೆ ಪಾಸ್ ಮಾಡಿಸಬೇಕು ; ಹೀಗೆ ದೇಶದಲ್ಲಿರತಕ್ಕ ಎಲ್ಲ ಕಷ್ಟಗಳನ್ನೂ ತಮ್ಮ ತಲೆಯ ಮೇಲೆ ಹೊತ್ತುಕೊಂಡಿದ್ದೀರಿ. ಇದು ಎಷ್ಟು ದೊಡ್ಡ ಜವಾಬ್ದಾರಿ, ಎಷ್ಟು ದೊಡ್ಡ ಖಾತೆ. ಎಷ್ಟು ಲಕ್ಷ ಅರ್ಜಿಗಳು ಬಂದಿವೆಯೋ ಗೊತ್ತಿಲ್ಲ. ಅವರ ಹತ್ತಿರ ಹೋಗಿಬಂದವರೇ ಹೇಳಿದ್ದಾರೆ. ಅವರು ಕೆಲವು ದಿವಸ ಬ್ಯಾಂಕ್ವೆಟ್ ಹಾಲಿನಲ್ಲಿ ಕೂರುತ್ತಿದ್ದರು ; ಅಲ್ಲಿ ಮೈಲಿಗಟ್ಟಲೆ ಸಾಲಾಗಿ ಜನರು ಅರ್ಜಿ ಕೊಡುವ ಸಲುವಾಗಿ ನಿಲ್ಲುತ್ತಿದ್ದರು. ಎಂಟು ದಿನ ಶಾಂತವಾಗಿ ಕೇಳಿದರು. ಆಮೇಲೆ ಮಾತನಾಡುವುದಕ್ಕೆ ಪ್ರಾರಂಭ ಮಾಡಿದರು, ಜಗಳ ಪ್ರಾರಂಭವಾಯಿತು ; ಕೊನೆಗೆ ಇವರಿಗೇ ನಿರಾಸಕ್ತಿ ಬಂತು. ಅರ್ಜಿ ಕೊಟ್ಟವರೇ ಬಂದು ಕೇಳಿದರು, ನಮ್ಮ ಅರ್ಜಿ ಏನಾಯಿತು ಎಂದು. ಪ್ರಾಮಾಣಿಕವಾಗಿ ಹೇಳಬೇಕಾದರೆ ಬಹುಶಃ ನಿಮಗೆ ಬೇಜಾರಾಗಿದೆ ಎಂದು ಕಾಣುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಇಲ್ಲ, ಇಲ್ಲ.

ಶ್ರೀ ವೈ. ರಾಮಕೃಷ್ಣ.—ಏಕೆಂದರೆ ಯಾವ ಮಾನವನ ಕೈಯಲ್ಲೂ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. ಸಾರ್ವಜನಿಕರು ತಮ್ಮ ಕುಂದುಕೊರತೆಗಳನ್ನು ಹೇಳಿಕೊಂಡು ಕೊಟ್ಟರತಕ್ಕ ಅರ್ಜಿಗಳನ್ನು ವಿಲೇವಾರಿ ಮಾಡಿ ಅವರಿಗೆ ಬೇಕಾದ ರಿಲೀಫ್ ಕೊಡತಕ್ಕ ಮಂತ್ರಿ ಇದುವರೆಗೆ ಹುಟ್ಟಿಲ್ಲ, ಮುಂದೆಯೂ ಹುಟ್ಟುವುದಿಲ್ಲ. ಇದೆಲ್ಲ ಮತ ಗಳಿಸುವ ಕಾರ್ಯಕ್ರಮವೇ ಹೊರತು ಬೇರೆ ಅಲ್ಲ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಕಡತ ವಿಲೇವಾರಿ ಮಾಡುತ್ತೇವೆಂದು ಹೇಳಿದ ಕಾರ್ಯಕ್ರಮ ಏನಾಯಿತು ?

ಶ್ರೀ ವೈ. ರಾಮಕೃಷ್ಣ.—ಅದರ ಬಗ್ಗೆ ಅಂಕಿ ಅಂಶಗಳನ್ನು ಕೊಟ್ಟಿದ್ದೇನೆ; ಆದರೆ ಮಂತ್ರಿಗಳಿಗೆ ಅದನ್ನು ಪ್ರಿಂಟ್ ಮಾಡಿಸಿಲ್ಲ. ಅದನ್ನೆಲ್ಲ ಆಮೇಲೆ ಹಂಚೋಣ.

ಒಬ್ಬ ಮಾನ್ಯ ಸದಸ್ಯರು.—ನಾನು ಕೊಟ್ಟ ಅರ್ಜಿಗೆ ಇದುವರೆಗೆ ಉತ್ತರವಿಲ್ಲ. ಆದ್ದರಿಂದ, ಇದು ಮತ ಗಳಿಸುವುದಕ್ಕೆ ಮಾಡಿರತಕ್ಕದ್ದು ಎಂಬುದನ್ನು ಒಪ್ಪಬಹುದು.

ಶ್ರೀ ವೈ. ರಾಮಕೃಷ್ಣ.—ಇದರಿಂದ ಯಾರು ಪ್ರಯೋಜನ ಹೊಂದಿದ್ದಾರೆ, ಇದರಿಂದ ಅವರ ಮನಸ್ಸಿಗೆ ಏನು ಸೂಕ್ತವೆಂದು ಕಾಣುತ್ತದೆ ಹೇಳಲಿ. ಆಮೇಲೆ ನಾನು ಕಡತ ವಿಲೇವಾರಿ ಬಗ್ಗೆ ಹೇಳುತ್ತೇನೆ. ಅನೇಕ ವರ್ಷಗಳಿಂದ ತಾಲ್ಲೂಕ್ ಆಫೀಸ್‌ನಲ್ಲಿ...

ಶ್ರೀ ಪಿ. ರಾಮದೇವ್.—ಈಗ 5 ಗಂಟೆ ಆಯಿತು. ಇವತ್ತೇ ಮುಗಿಸುತ್ತೀರೋ ಅಥವಾ ನಾಳೆ ಮುಂದುವರೆಸುತ್ತೀರೋ ?

ಉಪಾಧ್ಯಕ್ಷರು.—ಇನ್ನೂ ಎಷ್ಟು ಹೊತ್ತು ಬೇಕು ತಮಗೆ ?

ಶ್ರೀ ವೈ. ರಾಮಕೃಷ್ಣ.—ನನಗಿನ್ನೂ ಎರಡು ಗಂಟೆ ಬೇಕು. ನಾನು ಕಾನೂನು ಇಲಾಖೆ, ಹೌಸಿಂಗ್ ಇಲಾಖೆಯನ್ನು ಮುಟ್ಟೇ ಇಲ್ಲ. ಇನ್ನೂ ಶಾಸಕಾಂಗದಲ್ಲೇ ಇದ್ದೇನೆ.

ಉಪಾಧ್ಯಕ್ಷರು.—ನಿಮ್ಮ ಕಡೆ ಯಾರೂ ಮಾತನಾಡುವದಿಲ್ಲವೆ ಹಾಗಾದರೆ ? ತಮ್ಮ ಪಕ್ಷಕ್ಕೆ ಆಲಾಟ್ ಮಾಡಿರುವ ಟೈಮೆಲ್ಲಾ ತಾವೇ ತೆಗೆದುಕೊಂಡರೆ ಹೇಗೆ ?

ಶ್ರೀ ವೈ. ರಾಮಕೃಷ್ಣ.—ಇದು ಪ್ರಮುಖವಾದ ಅಂಗಗಳು. ಮಾನ್ಯ ಲಕ್ಷ್ಮೀಸಾಗರ್ ಅವರು ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗ ಈ ಮೂರಕ್ಕೂ ಮಂತ್ರಿಗಳು. ಇದರ ಜೊತೆಗೆ ಸಾರ್ವಜನಿಕ ಕುಂದುಕೊರತೆಗಳ ಹೊಣೆಯೂ ಇವರ ಮೇಲಿದೆ. ಶೇಕಡ 50 ಕ್ಕಿಂತ ಹೆಚ್ಚಿನ ಜವಾಬ್ದಾರಿ ಮಾನ್ಯ ಲಕ್ಷ್ಮೀಸಾಗರ್ ಅವರಿಗಿದೆ.

ಉಪಾಧ್ಯಕ್ಷರು.—ಚರ್ಚೆ ಇನಿಷಿಯೇಟ್ ಮಾಡುವವರಿಗೆ ಒಂದು ಗಂಟೆ ಅವಕಾಶ ಇದೆ.

ಶ್ರೀ ವೈ. ರಾಮಕೃಷ್ಣ.—ಒಂದು ಗಂಟೆಯಲ್ಲಿ ಮುಗಿಸುತ್ತೇನೆ. ಮುಖ್ಯವಾದ ವಿಷಯಗಳನ್ನು ಸಭೆಯ ಮುಂದೆ ಇಡುತ್ತೇನೆ. ಅಸತ್ಯವಾಗಿರುವ ವಿಷಯವನ್ನು ಹೇಳುವುದಿಲ್ಲ.

ಶ್ರೀ ಪಿ. ರಾಮದೇವ್.—ತಾವು ಚೆನ್ನಾಗಿ ಮಾತನಾಡುತ್ತೀರಿ, ಮಾತನಾಡಿ.

ಉಪಾಧ್ಯಕ್ಷರು.—ಈಗಾಗಲೇ ತಾವು 50 ನಿಮಿಷ ತೆಗೆದುಕೊಂಡಿದ್ದೀರಿ. 5–30 ರೊಳಗೆ ಮುಗಿಸಿ ಬಿಡಿ.

ಶ್ರೀ ವೈ. ರಾಮಕೃಷ್ಣ.—ಅದರಲ್ಲಿ 10 ನಿಮಿಷ ಇಂಟರಪ್ಷನ್ ಆಗಿದೆ.

ಉಪಾಧ್ಯಕ್ಷರು.—5–30 ರೊಳಗೆ ಮುಗಿಸಿಬಿಡಿ.

ಹಲವಾರು ಸದಸ್ಯರು.—ನಾಳೆ ಮಾತನಾಡಲಿ.

MR. DEPUTY SPEAKER.—The House now stands adjourned to meet tomorrow at 11 A.M.

(*The House adjourned at two minutes past Five of the Clock to meet again on Wednesday, the Thirty-first August,* 1983 *at Eleven of the Clock.*)